ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ

# ಸುತ್ತೂರು ವಾರ್ತೆ

ಖಾಸಗಿ ಪ್ರಸಾರ ಸಂಪುಟ : 13 ಸಂಚಿಕೆ : 4 ಪುಟ 8 ಸುತ್ತೂರು ಶ್ರೀಕ್ಷೇತ್ರ ಸೋಮವಾರ, 4 ಫೆಬ್ರವರಿ 2019



# ಭಾನುವಾರ ಸುತ್ತೂರು ಸಿರಿಧರೆಗಿಳಿದ ಭಾನು

**ಸುತ್ತೂರು ಶ್ರೀಕ್ಷೇತ್ರ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವ ಯೋಗಿಗಳವರ ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳಿಗೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು.

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಉತ್ಸವ ಮೂರ್ತಿಗೆ ಸಕಲ ವಿಧಿವಿಧಾನಗಳಿಂದ ಪೂಜೆ ಸಲ್ಲಿಸಲಾಯಿತು. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಉತ್ಸವಮೂರ್ತಿಗೆ ಬೆಳಗ್ಗೆ 10.55ರ ಶುಭ ಲಗ್ನದಲ್ಲಿ ರಾಜೋಪಚಾರ, ಪುಷ್ಪಾರ್ಚನೆ, ನಂದಿಧ್ವಜ ಪೂಜೆ, ಮಹಾಮಂಗಳಾರತಿಯೊಂದಿಗೆ ನೂತನ ಮಹಾ ರಥೋತ್ಸವಕ್ಕೆ ರಾಜ್ಯಪಾಲರು ಚಾಲನೆ ನೀಡಿದರು.

ಭಕ್ತ ಸಮೂಹವು ಉಘೇ.. ಉಘೇ.. ಶಿವರಾತ್ರೀಶ್ವರ, ಜೈ ಜೈ ಶಿವರಾತ್ರೀಶ್ವರ ಎಂದು ರಥವನ್ನು ಎಳೆಯುವ ಮೂಲಕ ಕ್ಷೇತ್ರದ ಮುಖ್ಯ ರಸ್ತೆಯಲ್ಲಿ ಸಾಗುತ್ತಾ ಹೋಯಿತು. ರಥವು ಚಲಿಸುತ್ತಿದ್ದಂತೆ ಭಕ್ತವೃಂದ ಹಣ್ಣು ಧವನಗಳನ್ನು ಭಕ್ತಿ ಪೂರ್ವಕವಾಗಿ ಹರ್ಷೋದ್ಗಾರದಿಂದ ರಥಕ್ಕೆ ಎಸೆಯುತ್ತಾ, ತಮ್ಮ ಭಕ್ತಿಯ ಪರಾಕಷ್ಠೆಯನ್ನು ವ್ಯಕ್ತಪಡಿಸಿದರು. ರಥೋತ್ಸವದಲ್ಲಿ ಭಾಗವಹಿಸಿದ್ದ ನಂದಿಧ್ವಜ ಕುಣಿತ, ವೀರಗಾಸೆ ಕುಣಿತ, ಮರಗಾಲು ಕುಣಿತ, ಕಂಸಾಳೆ ಕುಣಿತ, ಡೊಳ್ಳು ಕುಣಿತ, ಪೂಜಾ ಕುಣಿತ, ಕರಗ ಮಹೋತ್ಸವದ ಕೀಲು ಕುದುರೆ ಹಾಗೂ ನವಿಲು ಕುಣಿತ, ಗಾರುಡಿ ಗೊಂಬೆ, ತಮಟೆ ಮತ್ತು ನಗಾರಿ, ಜಾಂಜ್ ಮೇಳ, ಕುಂಭಮೇಳ, ಹುಲಿವೇಷಧಾರಿಗಳು ಹಾಗೂ ಮಲ್ಲಕಂಬಗಳು ಭಕ್ತಾದಿಗಳನ್ನು ಆಕರ್ಷಿಸುತ್ತಿತ್ತು. ರಥೋತ್ಸವವನ್ನು ಕಣ್ತುಂಬಿಕೊಳ್ಳಲು ಕರ್ನಾಟಕವಲ್ಲದೇ ಕೇರಳ, ಆಂಧ್ರ, ತಮಿಳುನಾಡು ಮತ್ತು ಮಹಾರಾಷ್ಟ್ರ ಸೇರಿದಂತೆ ದೇಶದಾದ್ಯಂತ ಹಲವು ರಾಜ್ಯಗಳಿಂದ ಭಕ್ತಾದಿಗಳು ಆಗಮಿಸಿದ್ದರು.



ಧಾರ್ಮಿಕ ಸಭೆಯನ್ನು ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಕೇಂದ್ರ ಸಚಿವರಾದ ಶ್ರೀ ಅನಂತಕುಮಾರ್ ದತ್ತಾತ್ರೇಯ ಹೆಗ್ಡೆಯವರು ಉದ್ಘಾಟಿಸಿದರು. ಚಿತ್ರದಲ್ಲಿ ಸಾಲೂರು, ಕುಂದೂರು, ಹೊಸಮಠ, ಶ್ರೀ ಲಕ್ಷ್ಮೀಸೇನ ದಿಗಂಬರ ಜೈನ, ಸಿದ್ದಗಂಗಾ ಮಠಗಳ ಶ್ರೀಗಳವರು ಹಾಗೂ ಶ್ರೀ ಕೆ.ಸಿ. ಕೊಂಡಯ್ಯ, ಶ್ರೀ ಅಮರೇಗೌಡ ಬಯ್ಯಾಪುರ ಅವರುಗಳಿದ್ದಾರೆ.

## ಭಾರತದ ಮಣ್ಣು ಶ್ರೇಷ್ಠ

### ಸಚಿವ ಶ್ರೀ ಅನಂತಕುಮಾರ್ ದತ್ತಾತ್ರೇಯ ಹೆಗ್ಡೆ

ಭಾರತವು ಸಹಸ್ರಾರು ವರ್ಷಗಳಿಂದ ದೈವಸ್ವರೂಪಿ ವಿಭೂತಿ ಪುರುಷರು ನಡೆದಾಡಿದ ಸಾತ್ವಿಕ ಭೂಮಿಯಾಗಿದೆ ಎಂದು ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ರಾಜ್ಯ ಸಚಿವರಾದ ಶ್ರೀ ಅನಂತಕುಮಾರ್ ದತ್ತಾತ್ರೇಯ ಹೆಗ್ಡೆರವರು ಹೇಳಿದರು.

ಧಾರ್ಮಿಕ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜಗತ್ತಿನ ಇತರೆ ದೇಶಗಳ ಮಣ್ಣಿಗಿಂತ ನಮ್ಮ ದೇಶದ ಮಣ್ಣು ಶ್ರೇಷ್ಠ. ಈ ನಾಡಿನ ಮಣ್ಣಿನ ಸ್ಪರ್ಶದಿಂದ ಸರ್ವ ಪಾಪಗಳು ನಿವಾರಣೆಯಾಗುತ್ತವೆ. ವಿಚಾರ ವಿನಿಯಮದೊಂದಿಗೆ ಒಳ್ಳೆಯ ಮನಸ್ಸಿನಿಂದ **2ನೇ ಪುಟಕ್ಕೆ**

# ನಕಲಿಗೆ ನೆಲೆಯಿಲ್ಲ ಅಸಲಿಗೆ ಕೊನೆಯಿಲ್ಲ

## ಶ್ರೀ ಶರಶ್ಚಂದ್ರ ಸ್ವಾಮಿಗಳ ವ್ಯಾಖ್ಯಾನ



ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಧಾರ್ಮಿಕ ಸಭೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮೈಸೂರಿನ ಶ್ರೀ ಕುಂದೂರು ಮಠದ ಡಾ. ಶ್ರೀ ಶರಶ್ಚಂದ್ರ ಸ್ವಾಮಿಗಳವರು ತಮ್ಮ ಶುಭ ಸಂದೇಶದಲ್ಲಿ ಸುತ್ತೂರು ಜಾತ್ರೆಯು ವೈಶಿಷ್ಟ್ಯತೆಯಿಂದ ಕೂಡಿದ ವಿಜೃಂಭಣೆಯಿಂದ ಆಚರಿಸುವ ಜಾತ್ರೆಯಾಗಿದೆ. ಇಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ, ಕೃಷಿ, ಕರಕುಶಲತೆ, ಸಾಮೂಹಿಕ ವಿವಾಹ ಮುಂತಾದ ಕಾರ್ಯಕ್ರಮಗಳು ಮೇಳೈಸಿವೆ. ಈ ಜಾತ್ರಾ ಮಹೋತ್ಸವವು ಅನೇಕ ಅರ್ಥಪೂರ್ಣ ಮತ್ತು ಉಪಯೋಗಕಾರಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಧರ್ಮವನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯ, ಇದು ನಮ್ಮೆಲ್ಲರನ್ನು ಒಂದುಗೂಡಿಸುವ ಹಾದಿಯಾಗಿದೆ. ಎಲ್ಲಾ ಭೇದ ಭಾವವನ್ನು ಬಿಟ್ಟು ಎಲ್ಲರೂ ಒಂದೇ ಎಂಬ ಮನೋಭಾವವನ್ನು ಮೂಡಿಸುವ ಜಾತ್ರೆ ಇದಾಗಿದೆ. ಮನುಷ್ಯನು ಮುಖವಾಡ ಧರಿಸಿ ಬದುಕಬಾರದು. ಹೃದಯಪೂರ್ವಕವಾಗಿ ಪ್ರತಿಕ್ರಿಯಿಸಬೇಕು. ನಾವು ಜೀವನದ ಅರ್ಥವನ್ನು ತಿಳಿದುಕೊಳ್ಳಬೇಕು. ನಕಲಿ ವ್ಯಕ್ತಿತ್ವವನ್ನು ತೋರ್ಪಡಿಸಬಾರದು. ನಿಷ್ಕಲ್ಮಶ ಮನಸ್ಥಿತಿ ಹೊಂದಿದವರಲ್ಲಿ ನಿಜವಾದ ಧರ್ಮವನ್ನು ಕಾಣಬಹುದು. ಮನುಷ್ಯನಿಗೆ ಎಲ್ಲಾ ಜ್ಞಾನ ಸಂಪಾದಿಸಿದ್ದೇನೆಂಬ ಅಹಃ ಇರಬಾರದು. ನಾನೇನು ತಿಳಿದಿಲ್ಲ ಎನ್ನುವವನೇ ನಿಜವಾದ ಜ್ಞಾನಿ. ಧರ್ಮ ಮಾರ್ಗದಲ್ಲಿ ನಡೆದಾಗ ಮನುಷ್ಯ ಶ್ರೇಷ್ಠನಾಗುತ್ತಾನೆ ಎಂದು ನುಡಿದರು. – ಪುಣ್ಯ.ಟಿ.ಬಿ

# ಸಮಾಜದ ಏಳಿಗೆಗೆ ಜೋಳಿಗೆ ಹಿಡಿದವರು: ಶ್ರೀ ಬಯ್ಯಾಪುರ



ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಧಾರ್ಮಿಕ ಸಭೆಯಲ್ಲಿ ಪಾಲ್ಗೊಂಡಿದ್ದ ಮಾಜಿ ಸಚಿವ ಮತ್ತು ಶಾಸಕರಾದ ಶ್ರೀ **ಅಮರೇಗೌಡ ಎಲ್. ಪಾಟೀಲ್ ಬಯ್ಯಾಪುರರವರು** ಸಭೆಯನ್ನುದ್ದೇಶಿಸಿ ಸುತ್ತೂರು ಶ್ರೀಕ್ಷೇತ್ರವು ಒಂದು ಧಾರ್ಮಿಕ ನೆಲೆಬೀಡಾಗಿದೆ. ಶ್ರೀಗಳು ತ್ರಿವಿಧ ದಾಸೋಹಿ ಎಂದೇ ಖ್ಯಾತರಾಗಿದ್ದಾರೆ. ಭರತಖಂಡದಲ್ಲಿ ಮಠಾಧೀಶರು ಕೊಟ್ಟಿರುವ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕೊಡುಗೆಯಿಂದಲೇ ಜನಸಾಮಾನ್ಯರ ಏಳಿಗೆಯಾಗುತ್ತಿದೆ. ಸಮಾಜದಲ್ಲಿ ಜಾತಿ-ಬೇಧ ಹಾಗೂ ಬಡವ ಬಲ್ಲಿದರೆಂಬ ತಾರತಮ್ಯ ವನ್ನು ಹೋಗಲಾಡಿಸಿ ಎಲ್ಲರಲ್ಲಿಯೂ ಏಕತೆಯನ್ನು ಕಾಣಲು ಸಾಮಾಜಿಕ ಬದಲಾವಣೆಯನ್ನು ಮಾಡುತ್ತಿದ್ದಾರೆ. ಯಾರು ಧರ್ಮವನ್ನು ರಕ್ಷಿಸುತ್ತಾರೋ ಅವರನ್ನು ಧರ್ಮ ರಕ್ಷಿಸುತ್ತದೆ ಎಂಬ ಸಂದೇಶವನ್ನು ಅರಿತು ಬಸವಣ್ಣನವರ ಹಾದಿಯಲ್ಲಿ ನಡೆದ ಶರಣರು ನಿರಂತರವಾಗಿ ಸಾಮಾಜಿಕ ಸೇವೆಯಲ್ಲಿ ತೊಡಗಿದ್ದಾರೆ. ಎಲ್ಲರೂ ಸಮಾಜಮುಖಿಯಾಗಿರಬೇಕು. ಪ್ರತಿಯೊಬ್ಬರನ್ನೂ ಗೌರವಿಸಬೇಕು. ಸಮಾಜದಲ್ಲಿ ಎಲ್ಲರೂ ಉನ್ನತ ಮಟ್ಟದ ಮಾರ್ಗದಲ್ಲಿ ನಡೆಯಬೇಕು. ಮಾನವೀಯ ಮೌಲ್ಯಗಳು ಮಾನವನ ಜೀವನದಲ್ಲಿ ಮುಖ್ಯವಾದವು. ಈ ನಿಟ್ಟಿನಲ್ಲಿ ವಿದ್ಯಾದಾನ, ಅನ್ನದಾನ ಮಾಡುತ್ತಾ, ಬಡವ-ಬಲ್ಲಿದರೆಂಬ ತಾರತಮ್ಯವಿಲ್ಲದೆ ಸರ್ವರನ್ನೂ ಸಮಾನತೆಯಿಂದ ಕಾಣುವ ತ್ರಿವಿಧ ದಾಸೋಹಿಯಾದ ಶ್ರೀಗಳವರ ಇಂತಹ ಜನೋಪಯೋಗಿ ಕಾರ್ಯಕ್ರಮಗಳು ಮೆಚ್ಚುವಂತಹದ್ದು ಎಂದು ಹೇಳಿದರು. – ಸುಮಾ ಪಿ.




**ಈಶನಾದ ಮಾದೇಶ:** ಸುತ್ತೂರು ಶ್ರೀಕ್ಷೇತ್ರದ ರಥೋತ್ಸವದಲ್ಲಿ ಭಾಗವಹಿಸಿದ್ದ ಮರಗಾಲು ಕಲಾವಿದ ಶ್ರೀ ತಾಯೂರು ಮಾದೇಶ ಶಿವರೂಪಿಯಾಗಿ ಮುಗಿಲೆತ್ತರಕ್ಕೆ ನಡೆಯುತ್ತಾ ಜನಸಾಗರವನ್ನು ಚಕಿತಗೊಳಿಸಿದರು.



ಕೆಸರು ಗದ್ದೆಯೊಳಗೆ ಹಗ್ಗ ಜಗ್ಗಾಟದ ಸ್ಪರ್ಧೆಗಿಳಿದಿರುವ ಯುವಕರು

**ನಾ ಹೇಗೆ ಬಣ್ಣಿಸಲಿ... ಗುರುವೇ... ಆದಿಜಗದ್ಗುರುವೇ...**




ಸುತ್ತೂರು ಜಾತ್ರೆಯ ನೇರ ವೀಕ್ಷಣೆ ಹಾಗೂ
ಸುತ್ತೂರು ವಾರ್ತೆ
ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಾಗಿ
www.jssonline.org


# ಆಡು ಮುಟ್ಟದ ಸೊಪ್ಪಿಲ್ಲ ಶ್ರೀಮಠ ಆಯೋಜಿಸದ ಕಾರ್ಯಕ್ರಮವಿಲ್ಲ



ಜಾತ್ರಾ ಮಹೋತ್ಸವದ ಅಂಗವಾಗಿ ಚಿತ್ರಕಲೆ, ಗಾಳಿಪಟ ಸ್ಪರ್ಧೆ ಮತ್ತು 51ನೇ ದನಗಳ ಜಾತ್ರೆಯ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಮಾಜಿ ಸಚಿವರಾದ ಶ್ರೀ **ಎಂ. ಶಿವಣ್ಣನವರು** ರಾಜ್ಯದ ವಿವಿಧ ಭಾಗಗಳಿಂದ ಜನರು ಆಗಮಿಸುತ್ತಿರುವುದು ಜಾತ್ರೆಯ ಹಿರಿಮೆಯನ್ನು ಸಾರುತ್ತಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದೇ ನನ್ನ ಸೌಭಾಗ್ಯವಾಗಿದ್ದು "ಆಡು ಮುಟ್ಟದ ಸೊಪ್ಪಿಲ್ಲ ಶ್ರೀಮಠ ಆಯೋಜಿಸದ ಕಾರ್ಯಕ್ರಮವಿಲ್ಲ" ಎಂಬಂತೆ ವಸ್ತುಪ್ರದರ್ಶನ, ರಂಗೋಲಿ, ಕೃಷಿ, ಭಜನಾಮೇಳ, ಕುಸ್ತಿ, ದೇಸಿ ಆಟಗಳಂತಹ ಜನೋಪಯೋಗಿ ಕಾರ್ಯಕ್ರಮಗಳು ಶ್ರೀಗಳ ನೇತೃತ್ವದಲ್ಲಿ ನಡೆಯುತ್ತಿವೆ.

25 ವರ್ಷಗಳಿಂದಲೂ ಶ್ರೀಮಠಕ್ಕೂ ನಮಗೂ ಅವಿನಾಭಾವ ಸಂಬಂಧವಿದ್ದು. ಶ್ರೀಗಳು ಸುನಾಮಿ, ಪ್ರಕೃತಿ ವಿಕೋಪ ಹಾಗೂ ರಾಜ್ಯ ಮತ್ತು ರಾಷ್ಟ್ರದ ಪ್ರಮುಖ ನಾಯಕರು ಸಂಕಷ್ಟದಲ್ಲಿರುವಂತಹ ಸಂದರ್ಭದಲ್ಲಿ ನೈತಿಕ ಬೆಂಬಲವಾಗಿ ನಿಲ್ಲುತ್ತಾರೆ. ರಾಜ್ಯದಲ್ಲಿರುವ ಸಾವಿರಾರು ಮಠಮಾನ್ಯಗಳು ಜ್ಞಾನಾನ್ನ ದಾಸೋಹಗೈಯುತ್ತಿದ್ದು ಸರ್ಕಾರಕ್ಕೆ ಪರ್ಯಾಯವಾಗಿ ಸೇವೆ ಸಲ್ಲಿಸುತ್ತಿರುವ ಇಂತಹ ಮಠಗಳಿಗೆ ಹೆಚ್ಚಿನ ನೆರವು, ಸಹಕಾರ ದೊರೆಯಬೇಕೆಂಬುದು ನನ್ನ ಅಭಿಪ್ರಾಯ ಎಂದು ತಿಳಿಸಿದರು. –ಅಮೂಲ್ಯ.ಬಿ.ಎಂ

## ಭಾರತದ ಮಣ್ಣು ಶ್ರೇಷ್ಠ

1ನೇ ಪುಟದಿಂದ

ಶಿವನನ್ನು ಪೂಜಿಸುವ ಮೂಲಕ ನರನು ನಾರಾಯಣನಾಗಬಹುದೆಂದು ಹೇಳಿದರು.

ಧರ್ಮ ಎಂಬುದು ಬದುಕಿನ ಮಾರ್ಗವಾಗಿದೆ. ಸೃಷ್ಠಿಯೊಂದಿಗೆ ಸಮಷ್ಠಿ ಮಾಡಿಕೊಳ್ಳುವುದೇ ಧರ್ಮವಾಗಿದೆ. ಈ ನಾಡು ದಾಸರು, ಶರಣರು ಕಾಯಕ ತತ್ವವನ್ನು ಬೋಧಿಸಿದ ಕರ್ಮಭೂಮಿಯಾಗಿದೆ. ಒಳ್ಳೆಯ ಮನಸ್ಸಿನಿಂದ ನಾವೇನು ಸತ್ಕಾರ್ಯ ಮಾಡುತ್ತೇವೆಯೋ ಅದೇ ಶಿವಾರಾಧನೆ. ಇಂಥಹ ಪುಣ್ಯಭೂಮಿಯ ದರ್ಶನ ಭಾಗ್ಯ ದೊರೆತದ್ದು ನನ್ನ ಪುಣ್ಯ ಎಂದು ನುಡಿದರು. – ವಿ. ಪ್ರಿಯದರ್ಶಿನಿ




**4 ಫೆಬ್ರವರಿ 2019**

**ಪ್ರಾತಃಕಾಲ 4.00 :** ಕರ್ತೃಗದ್ದುಗೆ : ಮಹಾರುದ್ರಾಭಿಷೇಕ
**ಬೆಳಗ್ಗೆ 6.30 :** ಚುಂಚನಹಳ್ಳಿ : ಸ್ನೇಹ–ಸೌಹಾರ್ದ–ಶಾಂತಿ–ಪ್ರಾರ್ಥನಾ ಪಥಸಂಚಲನ
**ಬೆಳಗ್ಗೆ 7.30 : ಷಟ್‌ಸ್ಥಲ ಧ್ವಜಾರೋಹಣ,** ನಿ.ಪ್ರ.ಸ್ವ.ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮಿಗಳು, ಶ್ರೀ ಸಲೀಲಾಖ್ಯ ಮಠ, ಬೆಟ್ಟದಪುರ ಹಾಗೂ ಕನ್ನಡ ಮಠ, ಬೆಟ್ಟಗೇರಿ, ವೀರಾಜಪೇಟೆ ತಾ.
**ಧರ್ಮಸಂದೇಶ : ಷ.ಬ್ರ.ಶ್ರೀ ಇಮ್ಮಡಿ ಬಸವರಾಜೇಂದ್ರ ಸ್ವಾಮಿಗಳು,** ಶ್ರೀ ದೊಡ್ಡ ಮಠ, ಕುಂದೂರು, ಮಳವಳ್ಳಿ ತಾ.
**ಸಂಜೆ 6.30 : ಶ್ರೀ ಮಹದೇಶ್ವರ ಕೊಂಡೋತ್ಸವ**
**ರಾತ್ರಿ 8.30 : ಲಕ್ಷದೀಪೋತ್ಸವ**
**ರಾತ್ರಿ 9.30 : ಶ್ರೀ ಮಹದೇಶ್ವರರ ಮುತ್ತಿನ ಪಲ್ಲಕ್ಕಿ ಉತ್ಸವ, ಗುರುಬ್ರಹ್ಮೋತ್ಸವ ಮತ್ತು ಜಂಗಮೋತ್ಸವ**

## ಸೋಬಾನೆ ಪದ ಸ್ಪರ್ಧೆಯ ಫಲಿತಾಂಶ

ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ವಸ್ತುಪ್ರದರ್ಶನದ ಆವರಣದಲ್ಲಿ ಶುಕ್ರವಾರ ಸೋಬಾನೆ ಪದ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. 56 ಸ್ಪರ್ಧಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಇದರಲ್ಲಿ ಬಾಗಲಕೋಟೆ ಜಿಲ್ಲೆಯ ಶ್ರೀಮತಿ ನೀಲವ್ವ ಬೆಳಪ್ಪನವರ್ ಅವರಿಗೆ ಪ್ರಥಮ ಬಹುಮಾನ, ಮಂಡ್ಯ ಜಿಲ್ಲೆಯ ಪಾಂಡವಪುರದ ಶ್ರೀ ಕೃಷ್ಣೇಗೌಡ ಹೆಗ್ಗಡಹಳ್ಳಿ ಅವರಿಗೆ ದ್ವಿತೀಯ ಬಹುಮಾನ ದ್ವಿತೀಯ ಬಹುಮಾನ ಹಾಗೂ ತೃತೀಯ ಬಹುಮಾನವನ್ನು ಧಾರವಾಡ ಜಿಲ್ಲೆಯ ನವುಲುಗುಂದ ತಾಲ್ಲೂಕಿನ ಮೌನೇಶ್ವರ ಸಂಘದ ಶ್ರೀಮತಿ ಆಲವ್ವ ಬಡಿಗೇರಿ ಇವರು ಗಳಿಸಿಕೊಂಡಿದ್ದಾರೆ. ಸಮಾಧಾನಕರ ಬಹುಮಾನವನ್ನು ಬಾಗಲಕೋಟೆ ಜಿಲ್ಲೆಯ ಶ್ರೀಮತಿ ರುಕ್ಕಮ್ಮ ಮತ್ತು ತಂಡದವರು ಪಡೆದುಕೊಂಡಿದ್ದಾರೆ. –ಎಂ.ಹರ್ಷಿತ

## ದೇವರ ಭಾಷೆಯೆಂದರೆ ಮನಸ್ಸಿನ ಭಾಷೆ


### ಷ.ಬ್ರ.ಶ್ರೀ ನಾಗಭೂಷಣ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು



**ಜಾ**ತ್ರಾ ಮಹೋತ್ಸವದ ಅಂಗವಾಗಿ ಸ್ನೇಹ–ಸೌಹಾರ್ದ ಶಾಂತಿ ಪಥಸಂಚಲನ ಕಾರ್ಯಕ್ರಮವನ್ನು ಬದನವಾಳು ಗ್ರಾಮದಲ್ಲಿ ಭಾನುವಾರ ಮುಂಜಾನೆ ಭಕ್ತಿ ಶ್ರದ್ಧೆಯಿಂದ ನೆರವೇರಿಸಲಾಯಿತು. ಊರಿನ ಪ್ರಮುಖ ಬೀದಿಗಳಲ್ಲಿ ಶಾಲಾ ಮಕ್ಕಳು ಪಥಸಂಚಲನದೊಂದಿಗೆ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವಮೂರ್ತಿಗೆ ಪೂಜೆ ಸಲ್ಲಿಸಿ ವಿಜೃಂಭಣೆಯಿಂದ ಮೆರವಣಿಗೆ ಮಾಡಲಾಯಿತು. ಪಾಂಡವಪುರ ತಾಲ್ಲೂಕಿನ ಬೇಬಿ ಬೆಟ್ಟದ ಶ್ರೀರಾಮಯೋಗೀಶ್ವರ ಮಠದ ನಿ.ಪ್ರ.ಸ್ವ. ಶ್ರೀ ಗುರುಸಿದ್ದೇಶ್ವರ ಸ್ವಾಮಿಗಳವರು ಷಟ್‌ಸ್ಥಲ ಧ್ವಜಾರೋಹಣವನ್ನು ನೆರವೇರಿಸಿ ಆಶೀರ್ವಚನ ನೀಡುತ್ತಾ, ಸುತ್ತೂರು ಜಾತ್ರೆ ದೇಶದಲ್ಲಿಯೇ ಪ್ರಮುಖ ಜಾತ್ರೆಯಾಗಿದೆ. ಇಡೀ ದೇಶವೇ ಮೆಚ್ಚುವಂತಹ ಕಾರ್ಯಕ್ರಮಗಳು ಇಲ್ಲಿ ಜರುಗುತ್ತಿವೆ. ಈ ಕ್ಷೇತ್ರದ ಬಗ್ಗೆ ದೇಶ–ವಿದೇಶದಲ್ಲಿ ಹೇಳಿಕೊಳ್ಳಲು ಬಹಳ ಹೆಮ್ಮೆಯಾಗುತ್ತದೆ. ಭಕ್ತರ ಜಾತ್ರೆ ಹಾಗೂ ಭಕ್ತರಿಗಾಗಿ ಮಾಡುವ ಜಾತ್ರೆ ಇದಾಗಿದೆ. ಯಾರು ಧರ್ಮವನ್ನು ರಕ್ಷಿಸುವ ಕಾರ್ಯದಲ್ಲಿ ತೊಡಗಿರುತ್ತಾರೋ ಅವರಿಂದ ಮಾತ್ರ ಈ ರೀತಿಯ ದೊಡ್ಡ ಪ್ರಮಾಣದಲ್ಲಿ ಜಾತ್ರೆಯನ್ನು ಮಾಡಲು ಸಾಧ್ಯ ಎಂದು ಹೇಳಿದರು.

ಗಂಗಾವತಿ ತಾಲ್ಲೂಕಿನ ಹೆಬ್ಬಾಳಿನ ಶ್ರೀ ಬೋಳೋಡಿ ಬಸವೇಶ್ವರ ಶಿವಯೋಗಿ ಸಂಸ್ಥಾನ ಬೃಹನ್ಮಠದ ಷ.ಬ್ರ. ಶ್ರೀ ನಾಗಭೂಷಣ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳವರು ಧರ್ಮಸಂದೇಶ ನೀಡುತ್ತಾ, ಜಾತ್ರೆಯನ್ನು ಆಯೋಜಿಸುವ ಮೂಲಕ ಅರ್ಥಪೂರ್ಣವಾದ ಕಾರ್ಯಕ್ರಮಗಳನ್ನು ಸುತ್ತೂರು ಶ್ರೀಗಳು ಮಾಡುತ್ತಾ ಬಂದಿದ್ದಾರೆ.

ತೇರು ಎಳೆಯುವ ಬನ್ನಿ ಎಂದು ಭಕ್ತಾದಿಗಳನ್ನು ಜಾತ್ರೆಗೆ ಕರೆಯಿಸಿ ಮನೋರಂಜನೆಯ ಕಡೆಗೆ ಮನಸ್ಸು ಕದಡದಂತೆ ಬೇರೆ ಬೇರೆ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೇರೇಪಿಸುವಂತಹ, ಜೀವನಕ್ಕೆ ಉಪಯೋಗವಾಗುವಂತಹ ಕಾರ್ಯಕ್ರಮಗಳನ್ನು ಸುತ್ತೂರು ಜಾತ್ರೆಯಲ್ಲಿ ಆಯೋಜಿಸಲಾಗುತ್ತಿದೆ. ಇದರಿಂದ ಜನರು ಸನ್ಮಾರ್ಗದಲ್ಲಿ ನಡೆಯಲು ಸಾಧ್ಯವಾಗುತ್ತದೆ. ಕಾಲ ಬದಲಾದಂತೆ ಕಾಲಕ್ಕೆ ತಕ್ಕಂತೆ ಜನರಿಗೆ ಬೇಕಾಗುವ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸುವ ಕಾರ್ಯವನ್ನು ಶ್ರೀಗಳು ಮಾಡುತ್ತಿದ್ದಾರೆ. ದೇವರ ಭಾಷೆಯೆಂದರೆ ಮನಸ್ಸಿನ ಭಾಷೆ ಎನ್ನುವ ಮಾತನ್ನು ಸುತ್ತೂರು ಶ್ರೀಗಳು ಭಕ್ತಾದಿಗಳಿಗೆ ತಿಳಿಸಿದ್ದಾರೆ ಎಂದು ಹೇಳಿದರು. – ಬಿ. ಮಾನಸ



ಭಜನಾಮೇಳದಲ್ಲಿ ಭಕ್ತಿಯಿಂದ ಶಿವನಾಮ ಭಜಿಸುತ್ತಿರುವ ಭಗಿನಿಯರು

## ಜೀವನಕ್ಕೆ ಧಾರ್ಮಿಕ ಸಂದೇಶಗಳು ಮುಖ್ಯ



ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಧಾರ್ಮಿಕ ಸಭೆಯಲ್ಲಿ ಉತ್ತರ ಅಮೇರಿಕಾದ ವೀರಶೈವ ಸಮಾಜದ ಅಧ್ಯಕ್ಷರಾದ ಶ್ರೀಶೈಲ ಆದಿಮನಿಯವರು ಉಪಸ್ಥಿತರಿದ್ದು ಮಾತನಾಡಿ ಧಾರ್ಮಿಕ, ಆಧ್ಯಾತ್ಮಿಕ ಸಂದೇಶಗಳು ಮಾನವನ ಜೀವನದಲ್ಲಿ ತುಂಬಾ ಮುಖ್ಯ. ಇವುಗಳ ಬಗ್ಗೆ ಅರಿವು ಮೂಡಿಸಲು ಈ ರೀತಿ ಮಹೋತ್ಸವಗಳು ತುಂಬಾ ಅವಶ್ಯಕವಾಗಿವೆ. ಸುತ್ತೂರು ಶ್ರೀಕ್ಷೇತ್ರ ಇದರಲ್ಲಿ ಎತ್ತಿದ ಕೈ. ಭಾರತದಲ್ಲಿ ಮಾತ್ರವಲ್ಲ ಹೊರ ದೇಶದಲ್ಲಿಯೂ ಸಹ ಜೆಎಸ್‌ಎಸ್ ಸಂಸ್ಥೆಗಳಿವೆ. ನಾವೂ ಸಹ ಇಂಥ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಶ್ರೀಗಳವರ ಕೃಪೆಗೆ ಪಾತ್ರರಾಗಬೇಕು ಎಂದು ಹೇಳಿದರು. –ಕೆ.ಎಸ್. ತೇಜಶ್ರೀ

## ಗಾಳಿಯ ಪಟದಂತೆ ನಮ್ಮ ಜೀವನ – ಶ್ರೀ ಎಸ್.ಎ. ರಾಮದಾಸ್

ಚಿತ್ರಕಲೆ ಹಾಗೂ ಗಾಳಿಪಟ ಸ್ಪರ್ಧೆ ಮತ್ತು 51ನೇ ದನಗಳ ಜಾತ್ರೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಎಸ್.ಎ. ರಾಮ್‌ದಾಸ್‌ರವರು ಮಾತನಾಡಿ 'ಶಿವನ ರೂಪವೇ ಸ್ವಾಮಿಗಳು', ನಮ್ಮ ಕುಟುಂಬದವರೆಲ್ಲ ಶ್ರೀಮಠದ ಶಿಕ್ಷಣ ಸಂಸ್ಥೆಯಿಂದ ಶಿಕ್ಷಣವನ್ನು ಪಡೆದು ಬಂದಿದ್ದೇವೆ ಎನ್ನುವುದಕ್ಕೆ ನನಗೆ ಹೆಮ್ಮೆಯೆನಿಸುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಯಾವುದೇ ಭೇದ ಭಾವವಿಲ್ಲದೆ ಉತ್ತಮ ಸಂಸ್ಕಾರ ಮತ್ತು ಒಳ್ಳೆಯ ಗುಣಗಳನ್ನು ಶ್ರೀಕ್ಷೇತ್ರವು ನೀಡುತ್ತಾ ಬಂದಿದೆ. ಸುತ್ತೂರು ಮಠವು ಕೇವಲ ಧರ್ಮದ ಬಗ್ಗೆ ಮಾತ್ರವಲ್ಲ, ಯುವಜನತೆಯನ್ನು ವಿಜ್ಞಾನ ಮತ್ತು ವೈಜ್ಞಾನಿಕತೆಯೆಡೆಗೆ ಕೊಂಡೊಯ್ಯುವಲ್ಲಿ ಯಶಸ್ವಿಯಾಗಿದೆ. ಗಾಳಿಪಟ ಹೇಗೆ ಎತ್ತರದ ಸ್ಥಾನದಲ್ಲಿ ಹಾರುತ್ತದೆಯೋ ಹಾಗೆಯೇ ನಮ್ಮ ಸುತ್ತಮುತ್ತಲಿನ ಜನರು ಕೂಡ ಮೇಲ್ಮಟ್ಟಕ್ಕೆ ಬೆಳೆಯಬೇಕೆಂದು ಅಭಿಪ್ರಾಯಪಡುತ್ತಾ, ಗಾಳಿಯ ಪಟದಂತೆ ನಮ್ಮ ಜೀವನ ಸೂತ್ರಧಾರನಾದ ಪರಮಾತ್ಮನು ನಮ್ಮ ಜೀವನವೆಂಬ ದಾರವನ್ನು ಯಾವಾಗ ಕೀಳುತ್ತಾನೋ ಆಗ ನಾವು ಹೋಗಬೇಕು. ನಮ್ಮ ಜೀವನದಲ್ಲಿ ಸಾಕಷ್ಟು ಕಷ್ಟ ಸುಖಗಳು ಬರುತ್ತವೆ ಅದನ್ನು ಹಿಮ್ಮೆಟ್ಟುತ್ತಾ ಮುಂದೆ ಸಾಗಬೇಕು. ಸುತ್ತೂರು ಮಠವು ಕೇವಲ ಧರ್ಮ ವಲ್ಲದೇ ವೈಜ್ಞಾನಿಕ ಸಂಶೋಧನೆ ಆರೋಗ್ಯ ಕ್ಷೇತ್ರದಲ್ಲಿ ಹಾಗೂ ದಾಸೋಹ ವಿಷಯದಲ್ಲಿ ಉತ್ತಮ ಸ್ಥಾನವನ್ನು ಪಡೆದಿದೆ ಎಂದು ನುಡಿದರು. –ತೇಜ




ಕೇಂದ್ರ ಸಚಿವರಾದ ಶ್ರೀ ಅಶ್ವಿನ್‌ಕುಮಾರ್ ಚೌಬೆ ಗಾಳಿಪಟ ಸ್ಪರ್ಧೆಗೆ ಚಾಲನೆ ನೀಡಿದರು. ಚಿತ್ರದಲ್ಲಿ ವಾಟಾಳು ಶ್ರೀಗಳು, ಕೋಡಿಮಠದ ಶ್ರೀಗಳು, ಶ್ರೀ ಶಿವಗಿರಿ ಶ್ರೀಗಳು, ಶ್ರೀ ಎಸ್.ಎ. ರಾಮದಾಸ್, ಶ್ರೀ ಮುಮ್ಮಡಿ ಶಿವರುದ್ರಸ್ವಾಮಿಗಳು, ಶ್ರೀ ಕವೀಶ್ ಗೌಡ, ಶ್ರೀ ಪಿ.ಎಚ್. ರಾಣೆ ಮೊದಲಾದವರಿದ್ದಾರೆ

# ಸರ್ವಜನಾಂಗದ ಹಿತವೇ ಶ್ರೀಮಠದ ಆಶಯ

ಚಿತ್ರಕಲೆ ಹಾಗೂ ಗಾಳಿಪಟ ಸ್ಪರ್ಧೆ, 51ನೇ ದನಗಳ ಜಾತ್ರೆ ಉದ್ಘಾಟನಾ ಸಮಾರಂಭದಲ್ಲಿ ಶುಭಸಂದೇಶ ನೀಡಿದ ಶ್ರೀ ಮರಳಗವಿ ಮಠದ ಶ್ರೀ ಮುಮ್ಮಡಿ ಶಿವರುದ್ರಸ್ವಾಮಿಗಳವರು ಭಕ್ತರಾದ ನೀವೂ ಎಲ್ಲರೂ ಸಹ ಜಾತ್ರೆಗೆ ಅನೇಕ ಆಶಯಗಳನ್ನು ಇಟ್ಟುಕೊಂಡು ಬಂದಿದ್ದೀರಿ. ಕೃಷಿಮೇಳ, ವಸ್ತುಪ್ರದರ್ಶನ, ದನಗಳ ಜಾತ್ರೆ ಹಾಗೂ ದೇಸಿ ಆಟಗಳು ಹೀಗೆ ಹಲವಾರು ಕಾರ್ಯಕ್ರಮಗಳನ್ನು ಜಾತ್ರೆಯಲ್ಲಿ ಕಣ್ತುಂಬಿಕೊಳ್ಳಬಹುದು ಈ ಎಲ್ಲಾ ಕಾರ್ಯಕ್ರಮಗಳ ಪ್ರೇರಕ ಶಕ್ತಿ ಇಂದಿನ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು. ದೇವರನ್ನು ನಾವೇ ಕಾಣುವ ಪ್ರಯತ್ನ ಮಾಡಬೇಕು. ಇದರ ಜೊತೆಗೆ ಶ್ರೀಗುರುವಿನ ದರ್ಶನವನ್ನು ಇಂತಹ ಜಾತ್ರೆಗಳ ನೇತೃತ್ವವನ್ನು ವಹಿಸಿರುವ ಪೂಜ್ಯ ಗುರುಗಳಲ್ಲಿ ಕಾಣಬಹುದು. ಧರ್ಮವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಬೋಧಿವೃಕ್ಷದ ಕೆಳಗಡೆ ಬುದ್ಧನು ಕನಸು ಕಂಡ ಹಾಗೆ, ಗಾಂಧೀಜಿಯ ಕನಸು ಅಹಿಂಸಾತ್ಮಕವಾಗಿತ್ತು, ಹಾಗೆಯೇ ಶ್ರೀಕ್ಷೇತ್ರದ ಕನಸು ಸರ್ವಸಮಾಜದ ಶ್ರೇಯೋಭಿವೃದ್ಧಿಯಾಗಿದೆ ಎಂದು ನುಡಿದರು. –ಸಿ. ವಿನೋದ್



ಚಿತ್ರಕಲಾ ಸ್ಪರ್ಧೆಗೆ ಕುಂಚದ ಮುಖೇನ ಚಾಲನೆ ನೀಡಿದ ಮರಳೇಗವಿ ಮಠದ ಶ್ರೀ ಮುಮ್ಮಡಿ ಶಿವರುದ್ರಸ್ವಾಮಿಗಳು. ಚಿತ್ರದಲ್ಲಿ ಶ್ರೀ ಬೇಲಿ ಮಠದ ಶ್ರೀಗಳು, ವಾಟಾಳು ಶ್ರೀಗಳು, ಶ್ರೀ ಜಯರಾಜೇಂದ್ರ ಸ್ವಾಮಿಗಳವರು, ಶ್ರೀ ಎಂ. ಶಿವಣ್ಣ ಮೊದಲಾದವರಿದ್ದಾರೆ.

# ಚಿತ್ರ ಬಿಡಿಸುವ ಸ್ಪರ್ಧೆಯ ವಿಜೇತರಿವರು

ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಚಿತ್ರಕಲೆ ಸ್ಪರ್ಧೆಯನ್ನು ಗಣಿ ಮತ್ತು ಭೂವಿಜ್ಞಾನ ಸಚಿವರಾದ ಶ್ರೀ ರಾಜಶೇಖರ ಬಸವರಾಜ ಪಾಟೀಲ್‌ರವರು ಉದ್ಘಾಟಿಸಿದರು.

**1 ರಿಂದ 2ನೇ ತರಗತಿ ವಿದ್ಯಾರ್ಥಿಗಳಿಗೆ ನೀಡಿದ್ದ ಮಕ್ಕಳ ವಿವೇಚನೆಗೆ ಬಿಟ್ಟ ಚಿತ್ರ ಬಿಡಿಸುವ ಸ್ಪರ್ಧೆ**ಯಲ್ಲಿ ಮೈಸೂರಿನ ಎಸ್.ಜೆ.ಸಿ.ಇ. ಶಾಲೆಯ 1ನೇ ತರಗತಿ ವಿದ್ಯಾರ್ಥಿ ಕ್ಷಿತಿ ಶಶಿಕಾಂತ್ ಪ್ರಥಮ ಬಹುಮಾನ ಪಡೆದರೆ, ಸೆಂಟ್ ಜೋಸೆಫ್ ಶಾಲೆಯ 1ನೇ ತರಗತಿ ವಿದ್ಯಾರ್ಥಿ ವೇದಶ್ರೀ 2ನೇ ಬಹುಮಾನವನ್ನು ಪಡೆದನು, ಮೂರನೇ ಬಹುಮಾನವನ್ನು ಸೆಂಟ್ ಜೋಸೆಫ್ ಸೆಂಟ್ರಲ್ ಶಾಲೆಯ 1ನೇ ತರಗತಿ ವಿದ್ಯಾರ್ಥಿ ದ್ರಿತಿ ವಿ. ಶಾ ತನ್ನ ಚಿತ್ತಾರ ಬಿಡಿಸಿ ಮೆತ್ತಿದ್ದ ಬಣ್ಣದ ಕೈಗಳಲ್ಲಿ ಹಿಡಿದನು. ಸಮಾಧಾನಕರ ಬಹುಮಾನಗಳನ್ನು ಸಿದ್ಧಾರ್ಥ ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಈಕ್ಷಾ ಪಿ., ಟೀಚರ್ಸ್ ಕಾಲೋನಿಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಪ್ರಮಥ ಎಸ್., ಚಿನಕುರಳಿಯ ಎಸ್.ಟಿ.ಜಿ. ಪಬ್ಲಿಕ್ ಶಾಲೆಯ ವಿದ್ಯಾರ್ಥಿ ದೀಪ್ತಿ ಎಂ., ಮೈಸೂರಿನ ವಿಜಯನಗರದ ಸೆಂಟ್ ಜೋಸೆಫ್ ಸೆಂಟ್ರಲ್ ಶಾಲೆಯ ವಿದ್ಯಾರ್ಥಿ ದ್ವಿತಿ ಎಂ.ಪಿ. ಹಾಗೂ ಆಟೋಮಿಕ್ ಎನರ್ಜಿ ಸೆಂಟ್ರಲ್ ಶಾಲೆಯ ವಿದ್ಯಾರ್ಥಿ ವಿಕ್ರಂ ಪಡೆದರು.

**3 ರಿಂದ 4ನೇ ತರಗತಿ ವಿದ್ಯಾರ್ಥಿಗಳಿಗೆ ನೀಡಿದ್ದ ಹೂದೋಟ ಚಿತ್ರ ಬಿಡಿಸುವ ಸ್ಪರ್ಧೆ**ಯಲ್ಲಿ ಮೈಸೂರಿನ ವೆಸ್ಟ್ ಲಯನ್ಸ್ ಸೇವಾನಿಕೇತನ ಶಾಲೆಯ 4ನೇ ತರಗತಿ ವಿದ್ಯಾರ್ಥಿ ನಿಸರ್ಗ ಡಿ.ವಿ. ಪ್ರಥಮ ಬಹುಮಾನ ಪಡೆದರೆ, ಜೆಎಸ್‌ಎಸ್ ಪಬ್ಲಿಕ್ ಶಾಲೆಯ 3ನೇ ತರಗತಿ ವಿದ್ಯಾರ್ಥಿ ಪ್ರೀತಲ್ ಎರಡನೇ ಬಹುಮಾನ ಪಡೆದರು. ಚಿನಕುರಳಿಯ ಎಸ್.ಟಿ.ಜಿ. ಪಬ್ಲಿಕ್ ಶಾಲೆಯ 4ನೇ ತರಗತಿ ವಿದ್ಯಾರ್ಥಿ ಭುವನ್ ಡಿ.ವಿ. ಮೂರನೇ ಬಹುಮಾನವನ್ನು ಪಡೆದರು. ಸಮಾಧಾನಕರ ಬಹುಮಾನಗಳನ್ನು ಬೆಂಗಳೂರಿನ ಹೆಚ್.ಎಸ್.ಆರ್. ಲೇಔಟ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಸಾನ್ವಿ ಸಾಸನ್ ಕೋಟ, ಮೈಸೂರಿನ ಸೆಂಟ್ ಜೋಸೆಫ್ ಸೆಂಟ್ರಲ್ ಶಾಲೆಯ ವಿದ್ಯಾರ್ಥಿ ಶ್ರೇಯಸ್ ಜೋಶಿ, ರಾಮಕೃಷ್ಣ ವಿದ್ಯಾಕೇಂದ್ರದ ಶ್ರೆಯ ಎಂ.ವಿ., ಲಯನ್ಸ್ ವೆಸ್ಟ್ ಸೇವಾನಿಕೇತನ ಶಾಲೆಯ ನಿಖಿತ ಸಿ.ಪಿ., ಬೆಂಗಳೂರಿನ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಹಿತೈಷಿ ಎಸ್.ವಿ. ಇವರುಗಳು ಪಡೆದರು.

**5 ರಿಂದ 7ನೇ ತರಗತಿ ವಿದ್ಯಾರ್ಥಿಗಳಿಗೆ ನೀಡಿದ್ದ ಭಾರತೀಯ ಆಹಾರ ಪದ್ಧತಿ ಚಿತ್ರ ಬಿಡಿಸುವ ಸ್ಪರ್ಧೆ**ಯಲ್ಲಿ ಮಂಗಳೂರಿನ ಡೆಲ್ಲಿ ಪಬ್ಲಿಕ್ ಶಾಲೆಯ 7ನೇ ತರಗತಿ ವಿದ್ಯಾರ್ಥಿ ಮೋಕ್ಷಿತ್ ಸುರೇಶ್ ಪ್ರಥಮ ಬಹುಮಾನವನ್ನು ಪಡೆದರೆ, ಮೈಸೂರಿನ ಆರ್.ಸಿ.ಐ.ಎಸ್. ಶಾಲೆಯ 6ನೇ ತರಗತಿ ವಿದ್ಯಾರ್ಥಿ ಸೋನಿಕ 2ನೇ ಬಹುಮಾನವನ್ನು ಪಡೆದಳು. ಬೆಂಗಳೂರಿನ ಜೆಎಸ್‌ಎಸ್ ಪಬ್ಲಿಕ್ ಶಾಲೆಯ 5ನೇ ತರಗತಿ ವಿದ್ಯಾರ್ಥಿ ಸೃಷ್ಠಿ ಎಂ. ಮೂರನೇ ಬಹುಮಾನವನ್ನು ಪಡೆದಳು. ಸಮಾಧಾನಕರ ಬಹುಮಾನಗಳನ್ನು ಮೈಸೂರಿನ ಬಾರ್ಡರ್ ಪೋವೆಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಪ್ರಗತಿ, ರಾಯಲ್ ಕನ್ಕರ್ಡ್ ಇಂಟರ್ ನ್ಯಾಷನಲ್ ಶಾಲೆಯ ವಿದ್ಯಾರ್ಥಿ ನಿಯುಕ್ತಾ ಆರ್., ಸೆಂಟ್ ಜೋಸೆಫ್ ಶಾಲೆಯ ವಿದ್ಯಾರ್ಥಿ ಸೃಷ್ಠಿ ಎಸ್. ಪಟೇಲ್, ಆದರ್ಶ ವಿದ್ಯಾಲಯದ ವಿದ್ಯಾರ್ಥಿ ಮನ್‌ಮೋಹ ಸಿ. ಹಾಗೂ ಚಾಮರಾಜನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಶ್ರೆಯಾ ಹೆಚ್.ಇ. ಪಡೆದರು.


**8 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ನನ್ನ ಕನಸಿನ ಭಾರತ ಕುರಿತು ಚಿತ್ರ ಬಿಡಿಸುವ ಸ್ಪರ್ಧೆ**ಯಲ್ಲಿ ಮೈಸೂರಿನ ಆಟೋಮಿಕ್ ಎನರ್ಜಿ ಸೆಂಟ್ರಲ್ ಶಾಲೆಯ 9ನೇ ತರಗತಿ ವಿದ್ಯಾರ್ಥಿ ಚಂದ್ರಿಮ ಪ್ರಥಮ ಬಹುಮಾನ ಪಡೆದರೆ, ಜೆಎಸ್‌ಎಸ್ ಪಬ್ಲಿಕ್ ಶಾಲೆಯ 8ನೇ ತರಗತಿ ವಿದ್ಯಾರ್ಥಿ ಅಕ್ಷಯ ಎಸ್. ಪಡೆದಳು. ರಾಯಲ್ ಕನ್ಕರ್ಡ್ ಇಂಟರ್ ನ್ಯಾಷನಲ್ ಶಾಲೆಯ 8ನೇ ತರಗತಿ ವಿದ್ಯಾರ್ಥಿ 8ನೇ ತರಗತಿ ವಿದ್ಯಾರ್ಥಿ ಸಿ. ಸಾಕ್ಷಿಗೆ ಮೂರನೇ ಬಹುಮಾನ ದೊರೆಯಿತು. ಸಮಾಧಾನಕರ ಬಹುಮಾನಗಳನ್ನು ಮೈಸೂರಿನ ಆಟೋಮಿಕ್ ಎನರ್ಜಿ ಸೆಂಟ್ರಲ್ ಶಾಲೆಯ ವಿದ್ಯಾರ್ಥಿ ಅರುಷಿ, ಅಮೃತ ವಿದ್ಯಾಲಯದ ವಿದ್ಯಾರ್ಥಿ ಸಂಜುಲ ಎಸ್., ಸಕಲೇಶಪುರದ ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಅತ್ಮಿಕಾ ಎಸ್., ಅಮೃತ ವಿದ್ಯಾಲಯದ ವಿದ್ಯಾರ್ಥಿ ಗೋಕುಲ್ ಆರ್.ಜಿ., ವೆಸ್ಟ್ ಲಯನ್ಸ್ ಸೇವಾನಿಕೇತನದ ವಿದ್ಯಾರ್ಥಿ ದಿಯಾ ಆರ್. ದರಿರ ಪಡೆದುಕೊಂಡರು.



ಜಾತ್ರಾ ಮಹೋತ್ಸವದ ದನಗಳ ಪರಿಷೆಯನ್ನು ಊಟಿ ಶಾಸಕರಾದ ಶ್ರೀ ಆರ್. ಗಣೇಶ್ ಉದ್ಘಾಟಿಸಿದರು. ಚಿತ್ರದಲ್ಲಿ ಜಗದ್ಗುರುಗಳವರು, ವಾಟಾಳು ಶ್ರೀಗಳು, ಮರಳೇ ಗವಿ ಮಠದ ಶ್ರೀಗಳು ಮೊದಲಾದವರಿದ್ದಾರೆ

## ಅಂತರಂಗದಲ್ಲಿ ಸಮಾನತೆಯ ಭಾವ ಮೂಡಬೇಕು

ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಧಾರ್ಮಿಕ ಸಭೆಯಲ್ಲಿ ಆಗಮಿಸಿದ್ದ ಮೈಸೂರಿನ ಕ್ಯಾಥೊಲಿಕ್



ಧರ್ಮಪ್ರಾಂತ್ಯದ ಶ್ರೀ ರೆ. ಲೆಸ್ಲಿ ಮೊರಾಸ್‌ರವರು ಉಪನ್ಯಾಸ ನೀಡುತ್ತಾ, ನಾವು ಸಮಾನತೆಯನ್ನು ಕಂಡುಕೊಳ್ಳಬೇಕಾದರೆ ನಮ್ಮ ಅಂತರಂಗದಲ್ಲಿ ಸಮಾನತೆಯ ಭಾವ ಮೂಡಬೇಕು. ಇಂದು ಜಾತಿ ಧರ್ಮಗಳು ನಮ್ಮನ್ನು ವಿಭಜಿಸುತ್ತಿವೆ. ಎಲ್ಲಾ ಧರ್ಮಗಳ ಸಾರ ಮನುಷ್ಯತ್ವವನ್ನು ಪ್ರತಿಪಾದಿಸುವುದೇ ಆಗಿದೆ. ಪ್ರೀತಿಯೇ ದೇವರು, ಸತ್ಯವೇ ದೇವರು ಎಂಬುವುದನ್ನು ನಾವು ಮರೆಯಬಾರದು. ಬಸವಣ್ಣನವರ ಕಾಯಕವೇ ಕೈಲಾಸ, ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ ಎಂಬ ವಚನಗಳ ಸಾರವನ್ನು ಅರಿತು. ನಾವು ಬದುಕಬೇಕು. ಶರಣರು, ದಾಸರು ಎಲ್ಲವನ್ನು ತ್ಯಜಿಸಿ ಪರರ ಸೇವೆಗಾಗಿಯೇ ತಮ್ಮ ಬದುಕನ್ನು ಸವೆಸಿ ಮಹತ್ಮರೆನಿಸಿಕೊಂಡರು. ನಿಜವಾದ ಧರ್ಮ ಎಂದರೆ ಪರರಿಗಾಗಿ ಬದುಕುವುದಾಗಿದೆ ಎಂದು ಹೇಳಿದ ಅವರು ಸುತ್ತೂರು ಶ್ರೀಮಠವು ಹನ್ನೆರಡನೆಯ ಶತಮಾನದ ಶರಣರ ಅನುಭವ ಮಂಟಪದ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಪುಣ್ಯ ಗಳಿಸಲು ಸನ್ಮಾರ್ಗದಲ್ಲಿ ನಡೆಯಬೇಕೆಂದು ತಮ್ಮ ಉಪನ್ಯಾಸದಲ್ಲಿ ತಿಳಿಸಿದರು.

## ಜಾತ್ರಾ ಮಹೋತ್ಸವ ಸಾಂಸ್ಕೃತಿಕ ಕಾರ್ಯಕ್ರಮಗಳು

### 4 ಫೆಬ್ರವರಿ 2019 ಸೋಮವಾರ * ಗದ್ದುಗೆ ಆವರಣ

**ಬೆಳಗ್ಗೆ 8.00 : ನಾದಸ್ವರ :** ಶ್ರೀ ಬಿ.ವಿ. ಜನಾರ್ಧನ್ ಮತ್ತು ತಂಡ, ಶಿವಮೊಗ್ಗ **9.00 : ಭಕ್ತಿಗೀತೆ ಮತ್ತು ಭಾವಗೀತೆ :** ಗಾನಸಿರಿ ಕಲಾವೃಂದ, ಮೈಸೂರು ಮಧ್ಯಾಹ್ನ 1.30 : ಜನಪದ ಗೀತೆ : ಶ್ರೀ ಚಿನ್ನಮಾದು ಮತ್ತು ತಂಡ ಮಲಾರ ಕಾಲೋನಿ, ಹೆಚ್.ಡಿ.ಕೋಟೆ ತಾ. **2.30 : ತತ್ವಪದ ಮತ್ತು ಜಾನಪದ** : ಶ್ರೀ ಜ್ಯೋತಿರ್ಲಿಂಗ ಹೊಣಕಟ್ಟೆ, ಬೆನಕನಹಳ್ಳಿ, ಇಂಡಿ ತಾ.

**ಸಂಜೆ 6.30 : ಭರತನಾಟ್ಯ :** ಕು.ತನುಜ ಐ.ಹೆಗಡೆ, ಮೈಸೂರು

ಗದ್ದುಗೆ ಆವರಣ. **ರಾತ್ರಿ 7.00 :** ಭಕ್ತಿಗೀತೆ ಮತ್ತು ಭಾವಗೀತೆ : ರಜತ ಕಲಾ ತಂಡ, ಶಿವಮೊಗ್ಗ.

### ಸ.ಹಿ.ಪ್ರಾ.ಶಾಲೆ ಪಕ್ಕದ ಆವರಣ

**7.00 : ಸುಗಮ ಸಂಗೀತ :** ಗಂಧರ್ವ ಗಾನ ತಂಡ, ಸುತ್ತೂರು.

**ಗದ್ದುಗೆ ಆವರಣ: ರಾತ್ರಿ 8.30 : ಯಕ್ಷ ವಚನ ವೈಭವ :** ಕದಳಿ ವನಿತಾ ಸಮಾಜ, ಶಿವಮೊಗ್ಗ

**ರಾತ್ರಿ 10.00 : ನಾಟಕಗಳು**

**ಹಿರಿಯರ ಮನೆ ಆವರಣ: ಮೋಹಿನಿ ಭಸ್ಮಾಸುರ :** ಶ್ರೀ ಶಿವರಾತ್ರೀಶ್ವರ ಕಲಾಸಂಘ, ಸುತ್ತೂರು, ನಂಜನಗೂಡು ತಾ

**ಶ್ರೀ ಸಿದ್ದನಂಜ ದೇಶಿಕೇಂದ್ರ ಮಂಗಳ ಮಂಟಪ: ದಾನಶೂರ ಕರ್ಣ :** ಶ್ರೀ ಶಿವರಾತ್ರೀಶ್ವರ ಕಲಾಸಂಘ, ಮೈಸೂರು

**ಸ.ಹಿ.ಪ್ರಾ.ಶಾಲೆ ಪಕ್ಕದ ಆವರಣ: ದಕ್ಷಯಜ್ಞ:** ಶ್ರೀ ಬಸವೇಶ್ವರ ಕಲಾಸಂಘ, ಬಸವನಹಳ್ಳಿ, ಟಿ.ನರಸೀಪುರ ತಾ.



## ದೇಸಿ ಆಟಗಳ ಸ್ಪರ್ಧೆ



ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಪ್ರತಿ ವರ್ಷದಂತೆ, ಈ ಬಾರಿಯೂ ಸಹ ವಿದ್ಯಾರ್ಥಿಗಳು ಹಾಗೂ ಗ್ರಾಮೀಣ ಜನತೆಗಾಗಿ ದೇಸಿಯ ಆಟಗಳ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಬೆಂಗಳೂರಿನ ನಿಮಾನ್ಸ್‌ನ ಮನೋವೈದ್ಯರಾದ ಡಾ. ವೆಂಕಟೇಶ್‌ರವರು ಹಗ್ಗ-ಜಗ್ಗಾಟದಲ್ಲಿ ಭಾಗವಹಿಸಿದ ಹಲ್ಲಹಳ್ಳಿ ಮತ್ತು ಸರಗೂರಿನ ಜೆಎಸ್‌ಎಸ್ ಪ್ರೌಢಶಾಲಾ ವಿದ್ಯಾರ್ಥಿಗಳು ಇರುವ ತಂಡಗಳಿಗೆ ಚಾಲನೆ ನೀಡಿದರು ಹಾಗೂ ಬುಗುರಿ ಆಟದಲ್ಲಿ ಸುತ್ತಮುತ್ತಲಿನ ಗ್ರಾಮದ ಜನರು ತುಂಬಾ ಉತ್ಸಾಹದಿಂದ ಬಂದು ಭಾಗವಹಿಸಿದ್ದರು. 50 ಕೆಜಿ ತೂಕ ಚೀಲ ಹೊತ್ತು ಓಡುವುದು, ಈ ಗ್ರಾಮೀಣ ಆಟದಲ್ಲಿ ಆಯೋಜಿಸಿದ್ದು ವಿಶೇಷವಾಗಿತ್ತು. ಈ ಆಟದಲ್ಲಿ 24 ಜನರು ಭಾಗವಹಿಸಿದ್ದರು. ಇದರಲ್ಲಿ ವಿಜೇತರಾದವರಿಗೆ ಪ್ರಥಮ, ದ್ವಿತೀಯ, ತೃತೀಯ ಹಾಗೂ ಸಮಾಧಾನಕರ ಬಹುಮಾನ ನೀಡಲಾಗುವುದೆಂದು ಸಂಚಾಲಕರು ಮಾಹಿತಿ ನೀಡಿದರು.

## ಜಾತ್ರೆಯಲ್ಲಿ ಯೋಗ ಪ್ರಯೋಗ




ಇಂದಿನ ಯಾಂತ್ರಿಕ ಯುಗಕ್ಕೆ ಆರೋಗ್ಯ ಅನ್ನುವುದು ದುಬಾರಿ ಯಾಗುತ್ತಿದೆ. ಸನಾತನ ಕಾಲದಿಂದ ಮಾನವನ ಆರೋಗ್ಯದ ಗುಟ್ಟು ಯೋಗಾಭ್ಯಾಸ. ಜಾತ್ರಾ ಮಹೋತ್ಸವದ ಅಂಗವಾಗಿ ಗದ್ದುಗೆ ಆವರಣ ದಲ್ಲಿ ನಂಜನಗೂಡು ಶಾಖೆಯ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯ ವತಿಯಿಂದ "ಯೋಗ ಪ್ರಾತ್ಯಕ್ಷಿಕೆ" ಕಾರ್ಯಕ್ರಮವನ್ನು ಹಾಗೂ ಕಲಾತ್ಮಕ ಯೋಗ ಪ್ರದರ್ಶನ ನಡೆಯಿತು.

ಈ ಯೋಗ ಕಾರ್ಯಕ್ರಮದಲ್ಲಿ ಸುಮಾರು 100 ಕ್ಕೂ ಹೆಚ್ಚು ಯೋಗ ಬಂಧುಗಳು ಹತ್ತು ತಂಡಗಳಲ್ಲಿ ಯೋಗ ಪ್ರಾತ್ಯಕ್ಷಿಕೆ ನೀಡಲಿದ್ದಾರೆ. ಇದರಲ್ಲಿ ಸಾಮಾನ್ಯವಾಗಿ ಸ್ತ್ರೀಯರಲ್ಲಿ ಕಂಡುಬರುವ ಬೆನ್ನುನೋವು, ಋತು ಚಕ್ರದಲ್ಲಿ ಕಂಡುಬರುವ ವ್ಯತ್ಯಾಸ, ಮೈಗ್ರಿನ್ ಹಾಗೂ ಪುರುಷರಲ್ಲಿ ಕಂಡುಬರುವ ಬೊಜ್ಜು, ಮಧು ಮೇಹ, ರಕ್ತದೊತ್ತಡಗಳಿಗೆ ಸಂಬಂಧಿಸಿದ ಪ್ರಾತ್ಯಕ್ಷಿಕೆಗಳಿರುತ್ತವೆ. ದೇಹ ಸಧೃಡವಾಗಿರಲು ಸರಳವಾಗಿ ಮನೆಯಲ್ಲೇ ಮಾಡಿಕೊಳ್ಳಬಹುದಾದ ಸರಳ ಯೋಗ, ಧ್ಯಾನಗಳನ್ನು ಹೇಳಿಕೊಡಲಾಯಿತು ಎಂದು ಸಮಿತಿಯ ಅಧ್ಯಕ್ಷರಾದ ಶ್ರೀ ಆರ್.ವಿ. ರೇವಣ್ಣ ಹಾಗೂ ಯೋಗ ಶಿಕ್ಷಕರಾದ ಶ್ರೀ ಪ್ರಕಾಶ್‌ರವರು ತಿಳಿಸಿದರು.

## ರಂಗೋಲಿ ಸ್ಪರ್ಧೆಯ ಫಲಿತಾಂಶ

ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ವಸ್ತುಪ್ರದರ್ಶನದ ಆವರಣದಲ್ಲಿ ರಂಗೋಲಿ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. 72 ಸ್ಪರ್ಧಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಸ್ಪರ್ಧಿಗಳನ್ನು ಎರಡು ತಂಡಗಳಾಗಿ ವಿಭಜಿಸಲಾಗಿತ್ತು. 20 ವರ್ಷ ಮೇಲ್ಪಟ್ಟ ಮಹಿಳೆಯರ ವಿಭಾಗದಲ್ಲಿ ಮೈಸೂರಿನ ಶ್ರೀಮತಿ ಸಾವಿತ್ರಿ ಸುಧಾಕರ್ ಪ್ರಥಮ ಬಹುಮಾನ, ಮಲ್ಲಿಪುರದ ಶ್ರೀಮತಿ ರೇಣುಕಾದೇವಿ ದ್ವಿತೀಯ ಬಹುಮಾನ, ಮೈಸೂರಿನ ಕೆ.ಎಸ್. ಶ್ರೀಮತಿ ತೃತೀಯ ಬಹುಮಾನ ಮತ್ತು ಮೈಸೂರಿನ ಶ್ರೀಮತಿ ಸುಕನ್ಯ ಸಮಾಧಾನಕರ ಬಹುಮಾನಗಳನ್ನು ಗಳಿಸಿದರು.

ಶಾಲಾ ಮಟ್ಟದಲ್ಲಿ ಆಯೋಜಿಸಿದ್ದ ಮಕ್ಕಳ ರಂಗೋಲಿ ಸ್ಪರ್ಧೆಯಲ್ಲಿ ಸುತ್ತೂರಿನ ಜೆಎಸ್‌ಎಸ್ ಶಾಲೆಯ ಮಕ್ಕಳಾದ ರಂಜಿತ ಬಿ.ಆರ್. ಪ್ರಥಮ ಬಹುಮಾನ, ವಿಜಯಲಕ್ಷ್ಮೀ ದ್ವಿತೀಯ ಬಹುಮಾನ, ನಂದಿನಿ ತೃತೀಯ ಬಹುಮಾನ ಮತ್ತು ಸುಲೋಚನ ಸಮಾಧಾನಕರ ಬಹುಮಾನ ಗಳಿಸಿದ್ದಾರೆ.–ಮಂದಾರ ಶ್ರೀನಿವಾಸ್

## ಜ್ಞಾನದಾಸೋಹ ಸಾರುವ ಜೆಎಸ್‌ಎಸ್ ಗ್ರಂಥಮಾಲೆ




ಪುಸ್ತಕಗಳು ಜ್ಞಾನದ ಬೆಳಕನ್ನು ಕೊಡುವ ಅಮೂಲ್ಯ ಸಂಪತ್ತಾಗಿದ್ದು ಮನುಷ್ಯನ ಭೌದ್ಧಿಕ ಸಾಮರ್ಥ್ಯವನ್ನು ಹೆಚ್ಚಿಸಲು ಸಹಕಾರಿಯಾಗಿವೆ. ಪುಸ್ತಕಗಳು ಒಳ್ಳೆಯ ಸ್ನೇಹಿತರಿದ್ದಂತೆ ಅವುಗಳನ್ನು ನಾವು ಅನೇಕ ವಿಚಾರಗಳನ್ನು ತಿಳಿದು ನಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳಬಹುದು ಇಂತಹ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ವಸ್ತುಪ್ರದರ್ಶನದ ಆವರಣದಲ್ಲಿ ತೆರೆಯಲಾಗಿದೆ. ಅವುಗಳಲ್ಲಿ ಪ್ರಮುಖವಾಗಿ ಜೆಎಸ್‌ಎಸ್ ಗ್ರಂಥಮಾಲೆಯು ಒಂದಾಗಿದ್ದು ಈ ಪುಸ್ತಕ ಮಳಿಗೆಯಲ್ಲಿ ಸುತ್ತೂರು ಶ್ರೀಮಠದ ಇತಿಹಾಸ, ಗುರುಪರಂಪರೆಗೆ ಸಂಬಂಧಪಟ್ಟ ಪುಸ್ತಕಗಳು, ಶರಣ ಸಾಹಿತ್ಯದ ಕುರಿತ ಅಮೂಲ್ಯ ಗ್ರಂಥಗಳು ಹಾಗೂ ಬಸವಾದಿ




ಶರಣರ ವಚನಗಳನ್ನು ಕುರಿತ ಪುಸ್ತಕಗಳು ಇಲ್ಲಿ ದೊರೆಯುತ್ತವೆ. ಅಲ್ಲದೆ ಪೂಜಾ ಪರಿಕರಗಳಾದ ರುದ್ರಾಕ್ಷಿ, ಕರಡಿಗೆ ಹಾಗೂ ಶ್ರೀ ಶಿವರಾತ್ರೀಶ್ವರರ ಮತ್ತು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸ್ಮರಣಿಕೆಗಳು, ಅಲ್ಲದೆ ಪುಸ್ತಕಗಳು ಶೇ.25ರಷ್ಟು ರಿಯಾಯಿತಿ ದರದಲ್ಲಿ ಮಾರಾಟಕ್ಕೆ ದೊರೆಯುತ್ತವೆ. ಸುತ್ತೂರು ಗುರುಪರಂಪರೆ, ವಚನ ಸಾಹಿತ್ಯ ಹಾಗೂ ಭಕ್ತಿಗೀತೆಗಳಿಗೆ ಸಂಬಂಧಪಟ್ಟ ಧ್ವನಿಸುರುಳಿಗಳ ಸಿ.ಡಿ.ಗಳು ದೊರೆಯುತ್ತವೆ. ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮ ಮತ್ತು ವೇದಾಂತ ಸಾಹಿತ್ಯ ಭಂಡಾರ ಇವರು ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರ ಜೀವನ ದರ್ಶನ ಹಾಗೂ ಧರ್ಮ, ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಪುಸ್ತಕಗಳ ಪ್ರದರ್ಶನ ಹಾಗೂ ರಿಯಾಯಿತಿ ದರದಲ್ಲಿ ಮಾರಾಟ ಮಾಡುತ್ತಿದ್ದಾರೆ.

– ಅಮೂಲ್ಯ



# ಬಹು ಆಕರ್ಷಣೀಯ ಸುತ್ತೂರು ವಸ್ತು ಸಂಗ್ರಹಾಲಯ



ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ವಸ್ತುಸಂಗ್ರಹಾಲಯವನ್ನು ರೂಪಿಸುವುದು ಮಹಾದಾಸೆಯಾಗಿತ್ತು. ಅದರಂತೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾಂಸ್ಕೃತಿಕ ಸಂಪತ್ತಿನ ಮೇಲೆ ಇರುವ ಆಸಕ್ತಿಯ ಫಲವಾಗಿ 1995ರಲ್ಲಿ ಸುತ್ತೂರಿನಲ್ಲಿ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಿದರು. ಆಗ ಆರಂಭವಾದ ವಸ್ತುವಿಶೇಷಗಳ ಸಂಗ್ರ ಹಣಾ ಕಾರ್ಯ ನಿರಂತರವಾಗಿ ಮುಂದುವರೆದಿದೆ. ಒಂದು ನಾಡಿನ ಐತಿಹಾಸಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಸಾಮಾಜಿಕ ಪರಂಪರೆಯನ್ನು ಬಿಂಬಿಸುವಲ್ಲಿ ವಸ್ತುಸಂಗ್ರಹಾಲಯಗಳ ಪಾತ್ರ ಮಹತ್ತರವಾದುದು. ವಸ್ತುಸಂಗ್ರಹಾಲಯಕ್ಕೆ ಜೀವಕಳೆ ಬರುವುದು ಅಲ್ಲಿ ಸಂಗ್ರಹವಾಗಿರುವ ಪ್ರಾಚೀನ ವಸ್ತುಗಳಿಂದ ಹಾಗೂ ನಮ್ಮ ಹಿರಿಯರು ಬಾಳಿ ಬದುಕಿದ ರೀತಿನೀತಿಗಳು ಹಾಗೂ ಆಚಾರ ವಿಚಾರಗಳ ಪ್ರತಿಬಿಂಬವಾಗಿದೆ.



ನಿರ್ಮಾಣ ಹಂತದಲ್ಲಿರುವ ನೂತನ ವಸ್ತು ಸಂಗ್ರಹಾಲಯದ ಕಟ್ಟಡ

ಶ್ರೀ ಮಠದ ದಾಸೋಹಭವನದ ಮೊದಲನೆಯ ಮಹಡಿಯಲ್ಲಿ ಪ್ರದರ್ಶನಗೊಂಡಿರುವ ವಸ್ತುಸಂಗ್ರಹಾಲಯಕ್ಕೆ ಪ್ರವೇಶಿಸುತ್ತಿದ್ದಂತೆಯೇ ಸುಮಂಗಲಿಯರ ಚಿತ್ರ ವೀಕ್ಷಕರನ್ನು ಸ್ವಾಗತಿಸುತ್ತದೆ. ಮುಂದೆ ಹೆಜ್ಜೆ ಇಡುತ್ತಿದ್ದಂತೆ ಶ್ರೀಮಠದ ಗುರು ಪರಂಪರೆಯ ಸ್ಥೂಲ ಪರಿಚಯದೊಂದಿಗೆ 22ನೇ ಜಗದ್ಗುರುಗಳಾದ ಮಂತ್ರಮಹರ್ಷಿ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರು ಬರೆದಿರುವ 'ಮಂತ್ರಲೇಖನ' ನೋಡುಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. 23ನೇ ಜಗದ್ಗುರುಗಳಾದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಉಪಯೋಗಿಸುತ್ತಿದ್ದ ವಸ್ತುಗಳು ಮತ್ತು ಧರಿಸುತ್ತಿದ್ದ ಉಡುಪುಗಳು ಪ್ರದರ್ಶನದಲ್ಲಿವೆ. ಮುಂದಿನ ವಿಭಾಗದಲ್ಲಿ ಪುರಾತನ ಕಾಲದ ನೂರಾರು ಓಲೆಗರಿಗಳು, ಹಸ್ತ ಪ್ರತಿಗಳು, ದೀಪ ಸ್ಥಂಭಗಳು, ಆಭರಣದ ಅಚ್ಚುಗಳು, ಬೀಗಗಳು, ಆಯುಧ ಗಳು, ಕೃಷಿ ಸಲಕರಣೆಗಳು, ದೇಶಿ ಮತ್ತು ವಿದೇಶಿ ನೋಟು, ನಾಣ್ಯಗಳಂತಹ ವಿಶೇಷ ವಸ್ತುಗಳು ನೋಡುಗರನ್ನು ಗತಕಾಲಕ್ಕೆ ಕೊಂಡೊಯ್ಯುವುದು ವಸ್ತುಸಂಗ್ರಹಾಲಯದ ವಿಶೇಷವಾಗಿದೆ. ನಿಮ್ಮಲ್ಲಿರ ಬಹುದಾದ ಹಳೆ ವಸ್ತುವಿಶೇಷಗಳನ್ನು ವಸ್ತುಸಂಗ್ರಹಾಲಯಕ್ಕೆ ನೀಡಬಹುದು. – ಸಿ.ಕೆ. ಸುನಿತ




**4 ಫೆಬ್ರವರಿ 2019 ಸೋಮವಾರ * ಬೆಳಗ್ಗೆ 10.30**

**ಕೃಷಿ ವಿಚಾರಸಂಕಿರಣ : ಉದ್ಘಾಟನೆ**

ವಿಷಯ : ರೈತರ ಆದಾಯ ದ್ವಿಗುಣ – ಅವಕಾಶಗಳು ಹಾಗೂ ಸವಾಲುಗಳು

ಸಮ್ಮುಖ : ಶ್ರೀ ಜಯೇಂದ್ರ ಪುರಿ ಮಹಾಸ್ವಾಮಿಗಳು, ಶ್ರೀ ಕೈಲಾಸಾಶ್ರಮ ಮಹಾಸಂಸ್ಥಾನ, ಬೆಂಗಳೂರು, ನಿ.ಪ್ರ.ಸ್ವ. ಡಾ. ಶ್ರೀ ಮುಮ್ಮಡಿ ನಿರ್ವಾಣಸ್ವಾಮಿಗಳು, ಶ್ರೀ ದೇಗುಲ ಮಠ, ಕನಕಪುರ

**ಅಧ್ಯಕ್ಷತೆ : ಶ್ರೀ ರಮೇಶ್ ಸಿ. ಜಿಗಜಿಣಗಿ,** ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ರಾಜ್ಯ ಸಚಿವರು

**ಉದ್ಘಾಟನೆ : ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ,** ಕೃಷಿ ಸಚಿವರು

**'ಕೃಷಿ ಕಾಯಕ' ವಿಶೇಷ ಸಂಚಿಕೆ ಬಿಡುಗಡೆ : ಶ್ರೀ ವಿ. ಶ್ರೀನಿವಾಸಪ್ರಸಾದ್,** ಮಾಜಿ ಸಚಿವರು

**ಮುಖ್ಯ ಅತಿಥಿಗಳು : ಶ್ರೀ ಇಟ್ಟಿಮಡೈ ಎ. ಷಣ್ಮುಗಂ,** ವಿಧಾನಸಭಾ ಸದಸ್ಯರು, ಕಿನಥುಕದಾವು, ತಮಿಳುನಾಡು, ಶ್ರೀ **ಎಂ.ವೈ. ಪಾಟೀಲ್,** ವಿಧಾನಸಭಾ ಸದಸ್ಯರು, ಅಫ್ಜಲಪುರ, ಶ್ರೀ ಸಿ. **ಅನಿಲ್‌ಕುಮಾರ್,** ವಿಧಾನಸಭಾ ಸದಸ್ಯರು, ಹೆಚ್.ಡಿ. ಕೋಟೆ, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಮೈಸೂರು, ಶ್ರೀ **ಎಂ. ಶಿವಣ್ಣ,** ಮಾಜಿ ಲೋಕಸಭಾ ಸದಸ್ಯರು, ಶ್ರೀ **ತೋಂಟದಾರ್ಯ,** ಮಾಜಿ ವಿಧಾನಪರಿಷತ್ ಸದಸ್ಯರು, ಶ್ರೀ **ಸಿ.ಎಚ್. ವಿಜಯಶಂಕರ್,** ಮಾಜಿ ಸಚಿವರು

ಉಪನ್ಯಾಸ : ಶ್ರೀ **ವಿ. ಕಾಂತರಾಜು,** ಕಂಬಳೀಪುರ, ಆನೇಕಲ್ ತಾಲ್ಲೂಕು, **ಶ್ರೀ ಚಿನ್ನಸ್ವಾಮಿ ವಡ್ಡಗೆರೆ,** ವಡ್ಡಗೆರೆ, ಗುಂಡ್ಲುಪೇಟೆ ತಾಲ್ಲೂಕು

**ಸಂಜೆ 4.00 * ಕೃಷಿ ವಿಚಾರಸಂಕಿರಣ : ಸಮಾರೋಪ**

**ವಿಷಯ : ಹವಾಮಾನ ಬದಲಾವಣೆ – ಮಾರುಕಟ್ಟೆ**

**ಸಮ್ಮುಖ : ಶ್ರೀ ಬಸವ ಮರುಳಸಿದ್ಧ ಸ್ವಾಮಿಗಳು,** ಶ್ರೀ ಬಸವ ಕೇಂದ್ರ, ಶಿವಮೊಗ್ಗ, ಬ್ರಹ್ಮಕುಮಾರಿ ಲಕ್ಷ್ಮೀಜಿ, ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಮೈಸೂರು

**ಅಧ್ಯಕ್ಷತೆ : ಶ್ರೀ ಕೃಷ್ಣ ಬೈರೇಗೌಡ,** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು

**ಸಮಾರೋಪ ಭಾಷಣ : ಶ್ರೀ ಬಿ.ಎಸ್. ಯಡಿಯೂರಪ್ಪ,** ವಿರೋಧಪಕ್ಷದ ನಾಯಕರು ಹಾಗೂ ಮಾಜಿ ಮುಖ್ಯಮಂತ್ರಿಗಳು

**ಮುಖ್ಯ ಅತಿಥಿಗಳು : ಕು. ಶೋಭಾ ಕರಂದ್ಲಾಜೆ,** ಲೋಕಸಭಾ ಸದಸ್ಯರು ಹಾಗೂ ಮಾಜಿ ಸಚಿವರು, ಶ್ರೀ **ಅಡಗೂರು ಹೆಚ್. ವಿಶ್ವನಾಥ್,** ಶಾಸಕರು ಹಾಗೂ ಮಾಜಿ ಸಚಿವರು, ಶ್ರೀ **ಎಂ.ಪಿ. ರೇಣುಕಾಚಾರ್ಯ,** ಶಾಸಕರು ಹಾಗೂ ಮಾಜಿ ಸಚಿವರು, **ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ,** ಮಾಜಿ ವಿಧಾನಪರಿಷತ್ ಸದಸ್ಯರು, **ಡಾ. ವಿಜಯ್ ಸಂಕೇಶ್ವರ,** ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ವಿಆರ್‌ಎಲ್ ಸಮೂಹ ಉದ್ದಿಮೆಗಳು, **ಡಾ. ಐಶರಿ ಕೆ. ಗಣೇಶ್,** ಸಂಸ್ಥಾಪಕ ಅಧ್ಯಕ್ಷರು, ವೆಲ್ಸ್ ಶಿಕ್ಷಣ ಸಂಸ್ಥೆಗಳು, ಚೆನ್ನೈ

**ಉಪನ್ಯಾಸ : ಶ್ರೀಮತಿ ಕವಿತಾ ಮಿಶ್ರಾ,** ಕವಿತಾಳ, ಮಾನ್ವಿ ತಾಲ್ಲೂಕು, ಶ್ರೀ **ಎಸ್.ಟಿ. ಪಾಟೀಲ್,** ಚಿಕ್ಕನಾದ, ಇಂಡಿ ತಾಲ್ಲೂಕು

# ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಮಾಗಮ

ಭಾನುವಾರ ಮಧ್ಯಾಹ್ನ ಸುತ್ತೂರು ಶ್ರೀಕ್ಷೇತ್ರದ ಜೆಎಸ್‌ಎಸ್ ಶಾಲೆಯ ಶ್ರೀ ಅಲ್ಲಮಪ್ರಭು ಸಭಾಂಗಣದಲ್ಲಿ ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಮಾವೇಶ ಕಾರ್ಯಕ್ರಮ ಜರುಗಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠ ಗ್ರಾಮೀಣಾಭಿವೃದ್ಧಿ ವಿಭಾಗದ ನಿರ್ದೇಶಕರಾದ ಡಾ. ಎಂ. ಮಹದೇವಪ್ಪನವರು ಮಾತನಾಡಿ ತಮ್ಮ ವಿದ್ಯಾಭ್ಯಾಸದ ದಿನಗಳನ್ನು ಸ್ಮರಿಸಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಉಚಿತ ಶಿಕ್ಷಣ ನೀಡುವ ವಿಷಯ ತಿಳಿದು ಮೈಸೂರಿನಲ್ಲಿ ಶಿಕ್ಷಣವನ್ನು ಪಡೆದುಕೊಂಡು, ಮುಂದೆ ಉನ್ನತ ಶಿಕ್ಷಣವನ್ನು ಪಡೆದು, ಉತ್ತಮ ಸ್ಥಾನಕ್ಕೇರುವುದಕ್ಕೆ ಶ್ರೀಮಠ ಕಾರಣ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಕ್ಕೆ ಖುಷಿಯಿದೆ, ಆದರೆ ಹಿರಿಯ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು. ಕರ್ನಾಟಕದಲ್ಲಿ ಸಮಸ್ಯೆಗಳು ಹೆಚ್ಚಿದೆ ರೈತರಿಗೆ ಅರಿವನ್ನು ಮೂಡಿಸುವ ಕಾರ್ಯವನ್ನು ಈ ಸಂಘದಿಂದ ಮಾಡಬೇಕೆಂದು ಹೇಳಿದರು.

ಬೆಂಗಳೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಡಾ. ಕೆ. ಸಿದ್ದಪ್ಪನವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ಸ್ಮರಿಸಿದರು. ನಂತರ ಮಾತನಾಡಿದ ಅವರು ನಾವೆಲ್ಲಾ ಇಂದು ಈ ಸ್ಥಾನದಲ್ಲಿ ನಿಂತಿದ್ದೇವೆ ಎಂದರೆ ರಾಜೇಂದ್ರ ಶ್ರೀಗಳವರೆ ಕಾರಣ ಎಂದರು. ಕರ್ನಾಟಕದಲ್ಲಿ ಇರುವಷ್ಟು ಮಠಗಳು ಭಾರತದ ಬೇರೆಲ್ಲೂ ಇಲ್ಲ. ರಾಜೇಂದ್ರ ಶ್ರೀಗಳು ಕಂಪ್ಯೂಟರ್ ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಕೋರ್ಸುಗಳನ್ನು ಆರಂಭಿಸುವ ಮೂಲಕ ಶಿಕ್ಷಣಕ್ಕೆ ಅಪಾರ ಕೊಡುಗೆ ನೀಡಿದರು. ಶ್ರೀಗಳು ಯಾವುದೇ ಭೇದಭಾವವಿಲ್ಲದೆ ಎಲ್ಲಾ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿದ್ದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. – ಪಿ. ಅನುಷ



ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಮಾವೇಶದಲ್ಲಿ ಸಂಘದ ಮುಂದಿನ ಕಾರ್ಯ ಯೋಜನೆಗಳ ಬಗ್ಗೆ ಪದಾಧಿಕಾರಿಗಳು ಪರಸ್ಪರ ಸಮಾಲೋಚನೆ ನಡೆಸಿದರು.

# ಭಾರತ ಒಂದು ಜಾತ್ಯತೀತ ರಾಷ್ಟ್ರ

ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಧಾರ್ಮಿಕ ಸಭೆಯಲ್ಲಿ ಆಗಮಿಸಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ ಕೇಂದ್ರೀಯ ಜುಮಾ ಮಸೀದಿಯ ಶ್ರೀ **ಎಸ್.ಬಿ. ಮಹಮ್ಮದ್ ದಾರಿಮಿಯವರು** ಉಪನ್ಯಾಸ ನೀಡುತ್ತಾ, ಭಾರತ ಒಂದು ಜಾತ್ಯತೀತ ರಾಷ್ಟ್ರವಾಗಿದ್ದು, ಎಲ್ಲಾ ಜಾತಿ, ಧರ್ಮಗಳ ಜನರು ಇಲ್ಲಿ ಒಟ್ಟಿಗೆ ವಾಸಿಸುತ್ತಿದ್ದಾರೆ. ಎಲ್ಲಾ ಧರ್ಮಗಳ ಸಾರ ಮಾನವೀಯತೆಯನ್ನು ಪ್ರತಿಪಾದಿಸುವುದೇ ಆಗಿದೆ. ಧರ್ಮದಲ್ಲಿರುವ ಒಳ್ಳೆಯ ತತ್ವಗಳನ್ನು ಪಡೆದು ಅಳವಡಿಸಿಕೊಂಡು ಉತ್ತಮ ಬದುಕನ್ನು ನಡೆಸಬೇಕು. ಒಗ್ಗಟ್ಟಿನಲ್ಲಿ ಬಲವಿದೆ ಎಂಬಂತೆ ಎಲ್ಲರೂ ಐಕ್ಯತೆಯಿಂದ ಜೀವನವನ್ನು ನಡೆಸಿದರೆ ಶಾಂತಿ, ನೆಮ್ಮದಿಯ ಸಮಾಜ ನಿರ್ಮಾಣವಾಗಲು ಸಾಧ್ಯವಾಗುತ್ತದೆ. ಇಂದು ಜಾತಿ, ಧರ್ಮದ ವಿಷಯದಲ್ಲಿ ನಾವು ಬೇರೆ ಬೇರೆಯಾಗುತ್ತಿದ್ದೇವೆ. ಇದರಿಂದ ಸಮಾಜದಲ್ಲಿ ಅಶಾಂತಿ ಉಂಟಾಗುತ್ತಿದೆ. ನಾವು ಎಲ್ಲಾ ಧರ್ಮಗಳ ಜನರನ್ನು ಪ್ರೀತಿಸುವುದನ್ನು, ಗೌರವಿಸುವುದನ್ನು ಕಲಿಯಬೇಕು ಎಂದು ಹೇಳಿದ ಅವರು, ಭಾಷಣಗಳಲ್ಲಿ ಎರಡು ರೀತಿಗಳಿವೆ, ಒಂದು ಹೃದಯಗಳನ್ನು ಬೇರ್ಪಡಿಸುವ ಭಾಷಣ, ಮತ್ತೊಂದು ಹೃದಯಗಳನ್ನು ಜೋಡಿಸುವ ಭಾಷಣ, ನಾವು ಹೃದಯಗಳನ್ನು ಜೋಡಿಸುವ ಭಾಷಣಗಳನ್ನು ಮಾಡುವ ಮೂಲಕ ಜನರಲ್ಲಿ ಐಕ್ಯತೆಯನ್ನು ಉಂಟುಮಾಡಬೇಕೆಂದು ಹೇಳಿದರು. – ಹರ್ಷಿತ ಎಂ.

## ನಂಬಿ ಕರೆದರೆ ಓ ಎನ್ನನೇ ಶಿವನು

ಜಾತ್ರಾ ಮಹೋತ್ಸವದಲ್ಲಿ ಹಾರನಹಳ್ಳಿಯ ಸುಕ್ಷೇತ್ರ ಶ್ರೀ ಕೋಡಿಮಠ ಮಹಾಸಂಸ್ಥಾನ ಮಠದ **ನಿ.ಪ್ರ.ಸ್ವ. ಡಾ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳು** ಧ್ಯಾನಾಸಕ್ತನಾಗಿ ನಂಬಿಕೆಯಿಂದ ಕರೆದರೆ ದೇವನು ತಿರುಗಿ ನೋಡುತ್ತಾನೆ. ಪ್ರತಿಯೊಂದು ಧರ್ಮದಲ್ಲೂ ಮಂತ್ರಗಳು ಮಹತ್ವಪೂರ್ಣ ಪಾತ್ರ ವಹಿಸುತ್ತವೆ. ಅಂತೆಯೇ ಮಂತ್ರ ಉಚ್ಚಾರದಿಂದ ಜಗತ್ತು ಸರ್ವರ ಒಳಿತನ್ನು ಕಾಣಬಹುದಾಗಿದೆ ಎಂದು ನುಡಿದರು. – ಕುಮಾರ ಜೆ ಎನ್




**ವಾಟಾಳ್ ಆನಂದ್, ಬಿ.ಎನ್. ನಿಜಲಿಂಗಪ್ಪ, ಜಯಶಂಕರ್, ಮಂಜುನಾಥ್, ಶಶಾಂಕ್, ನಂಜುಂಡನಾಯ್ಕ**



**ಇದು ಹುಡುಗರ ಹುಡುಗಾಟವಲ್ಲ, ಕೆಸರು ಗದ್ದೆ ಓಟ...**

# ಎನ್‌ಸಿಸಿ ಕೆಡೆಟ್ ಮಂಜುಗೆ ಅಭಿನಂದನೆ

ಸುತ್ತೂರು ಜಾತ್ರೆಯು ತುಂಬಾ ಶಿಸ್ತುಬದ್ಧವಾಗಿ ನಡೆಯುವಲ್ಲಿ ನಮ್ಮ ಜೆಎಸ್‌ಎಸ್ ಸಂಸ್ಥೆಯ ವಿವಿಧ ಕಾಲೇಜುಗಳಲ್ಲಿನ ಎನ್‌ಸಿಸಿ ಕೆಡೆಟ್‌ಗಳ ಪಾತ್ರವೂ ಅತ್ಯಂತ ಪ್ರಮುಖವಾದುದು. ಸುಮಾರು 250ಕ್ಕೂ ಅಧಿಕ ಕೆಡೆಟ್‌ಗಳು ಜಾತ್ರಾ ಸಮಯದಲ್ಲಿ ಸೇವೆ ಸಲ್ಲಿಸುತ್ತಾರೆ. ಇವರಲ್ಲಿ ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಎನ್‌ಸಿಸಿ ಕಂಪನಿ ಸೀನಿಯರ್ ಅಂಡರ್ ಆಫೀಸರ್ ಆಗಿರುವ ಬಿಎಸ್‌ಸಿ ವಿದ್ಯಾರ್ಥಿ ಎಂ.ಯು. ಮಂಜು ಅವರು 2018ರಲ್ಲಿ ನವದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಪಾಲ್ಗೊಂಡಿದ್ದರು. ಇವರು ಸಲ್ಲಿಸುತ್ತಿರುವ ಸೇವೆಯನ್ನು ಪರಿಗಣಿಸಿರುವ ರಾಜ್ಯ ಸರ್ಕಾರ ಇವರನ್ನು ಅಭಿನಂದಿಸಿ, ಮುಖ್ಯಮಂತ್ರಿಗಳ ಪ್ರಶಂಸಾ ಪತ್ರವನ್ನು ನೀಡಿ ಗೌರವಿಸಿದೆ. ಸುತ್ತೂರು ಜಾತ್ರಾ ಸಮಿತಿಯು ಅಭಿನಂದಿಸಿದೆ.



**ಜಗದ್ಗುರುಗಳ ಸಾನ್ನಿಧ್ಯದಲ್ಲಿ ಕೇಂದ್ರ ಸಚಿವ ಶ್ರೀ ಅನಂತ್‌ಕುಮಾರ್ ಹೆಗ್ಡೆಯವರು ಕೆಡೆಟ್ ಶ್ರೀ ಮಂಜುರವರನ್ನು ಸನ್ಮಾನಿಸಿದರು.**


# ಭಜನಾ ಕಲೆ; ಈ ಬಾರಿ ದಾಖಲೆ!




ಸುತ್ತೂರು ಜಾತ್ರಾ ಮಹೋತ್ಸದ ಅಂಗವಾಗಿ ನಡೆಯುತ್ತಿರುವ ರಾಜ್ಯ ಮಟ್ಟದ 27ನೇ ಭಜನಾ ಮೇಳ ಸ್ಪರ್ಧೆಯಲ್ಲಿ ಈ ಬಾರಿ 800ಕ್ಕೂ ಹೆಚ್ಚೂ ಭಜನಾ ತಂಡಗಳು ಭಾಗವಹಿಸಿದ್ದು, ಕಳೆದ ವರ್ಷದ ದಾಖಲೆಯನ್ನು ಮೀರುವಂತೆ ಹೆಸರುಗಳು ನೋಂದಣಿಯಾಗಿವೆ.

800 ತಂಡಗಳು ಭಾಗವಹಿಸಿದ್ದು, 7 ಹಂತಗಳಲ್ಲಿ ವಿಭಾಗಿಸಿ ಪ್ರತ್ಯೇಕ ಸ್ಪರ್ಧೆ, ಪ್ರತ್ಯೇಕ ಬಹುಮಾನಗಳು, ಪ್ರಶಸ್ತಿ ಪತ್ರ ಹಾಗೂ ನೆನಪಿನ ಕಾಣಿಕೆಗಳನ್ನು ನೀಡಲಾಗುವುದು. ಉತ್ತರ ಕರ್ನಾಟಕದ ಜಿಲ್ಲೆಗಳಿಂದ ಹೆಚ್ಚಿನ ತಂಡಗಳು ನೋಂದಣಿಯಾಗಿರುವುದು ಸಂತಸ ತಂದಿದೆ. ಹೊಸ ಹೊಸ ತಂಡಗಳು ಸಹ ಬಂದಿವೆ. ಈ ಬಾರಿ ಕೇವಲ ಕರ್ನಾಟಕದಿಂದ ಮಾತ್ರವಲ್ಲದೆ ಕೇರಳದಿಂದ 15 ತಂಡಗಳು ಭಾಗವಹಿಸುತ್ತಿರುವುದು ಭಜನಾ ಮೇಳದ ವಿಶೇಷವಾಗಿದೆ. ಸುಮಾರು 5000ಕ್ಕೂ ಹೆಚ್ಚಿನ ಭಜನಾ ಕಲಾವಿದರು ಭಾಗವಹಿಸುತ್ತಿರುವುದು ಜಾತ್ರೆಗೆ ಒಂದು ಕಳೆಯನ್ನು ತಂದುಕೊಟ್ಟಿದೆ. ಉತ್ತರ ಕರ್ನಾಟಕದ ಕಲಾವಿದರ ವೇಷ–ಭೂಷಣಗಳು ನೋಡುಗರ ಕಣ್ಮನ ತಣಿಸುತ್ತಿವೆ. ಈ ಸ್ಪರ್ಧೆಯಲ್ಲಿ ತತ್ವ ಪದಗಳು, ದಾಸರ ಪದಗಳು, ವಚನಗಳು ಹಾಗೂ ಭಜನೆಗಳನ್ನು ಹಾಡಲು ಅವಕಾಶವಿದೆ. ಆಗಮಿಸಿರುವ ಭಜನಾ ಸ್ಪರ್ಧಿಗಳಿಗೆ ವಸತಿ, ದಾಸೋಹ ಮುಂತಾದ ಸೌಲಭ್ಯಗಳನ್ನು ಶ್ರೀಮಠವು ನೀಡುತ್ತಿದೆ. ಭಜನಾ ಮೇಳದ ತಂಡವನ್ನು ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ, ಪುರುಷರ ವಿಭಾಗ–465, ಮಕ್ಕಳ ವಿಭಾಗ–25, ಮಹಿಳಾ ನಗರ ವಿಭಾಗ– 50, ಮಹಿಳಾ ಗ್ರಾಮಾಂತರ–135, ಮಹಿಳಾ ಏಕತಾರಿ ವಿಭಾಗ–45 ಹಾಗೂ ಹೊರ ರಾಜ್ಯಗಳಿಂದ 15 ತಂಡಗಳು ಬಂದಿದ್ದು, ಭಜನಾ ಮೇಳಕ್ಕೆ ಮೆರುಗು ತಂದಿದೆ ಎಂದು ಸಂಚಾಲಕರಾದ ಪ್ರೊ. ಡಿ. ಎಸ್. ಸದಾಶಿವಮೂರ್ತಿ ತಿಳಿಸಿದರು. –ಅನುಷ.ಪಿ

## ಭಾನುವಾರ ಒಂದೇ ದಿನ 50 ಸಾವಿರಕ್ಕೂ ಹೆಚ್ಚು ಜನರಿಂದ ವಸ್ತುಪ್ರದರ್ಶನ ವೀಕ್ಷಣೆ



# ‘ಅರಿತರೆ ಮಾನವ ಮರೆತರೆ ದಾನವ’

## ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು

ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಧಾರ್ಮಿಕ ಸಭೆಯ ದಿವ್ಯ ಸಮ್ಮುಖ ವಹಿಸಿದ್ದ ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ನಿ.ಪ್ರ.ಸ್ವ. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಶುಭ ಸಂದೇಶ ನೀಡುತ್ತಾ, ಬಸವಣ್ಣನವರ “ದಯೆಯೇ ಧರ್ಮದ ಮೂಲವಯ್ಯ” ಎಂಬ ನುಡಿಯಂತೆ ಎಲ್ಲಾ ಧರ್ಮಗಳ ಸಾರವೂ ಒಂದೇ ಆಗಿದ್ದು, ಮಾನವನನ್ನು ದೈವತ್ವದೆಡೆಗೆ ಕರೆದೊಯ್ಯುತ್ತವೆ. ಧರ್ಮವನ್ನು ಮನುಷ್ಯ ಎಂದಿಗೂ ಮರೆಯಬಾರದು. ಮರೆತರೆ ಮನುಷ್ಯನಿಗೂ, ಪ್ರಾಣಿಗೂ ಯಾವುದೇ ವ್ಯತ್ಯಾಸ ಇರುವುದಿಲ್ಲ. ಮಾನವ ಅತಿ ಆಸೆಯಿಂದ ಶಾಂತಿ, ನೆಮ್ಮದಿ, ತೃಪ್ತಿ ಕಳೆದುಕೊಂಡು ಬದುಕುತ್ತಿದ್ದಾನೆ. ನಮ್ಮ ಬದುಕಿನಲ್ಲಿ ಒಮ್ಮೆ ಕಳೆದುಕೊಂಡ ಶಾಂತಿ, ನೆಮ್ಮದಿಯನ್ನು ಮತ್ತೆ ಪಡೆದುಕೊಳ್ಳಲು ಸಾಧ್ಯವಿಲ್ಲ. ನಾವು ಇಂಥಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶರಣರ ಸಂದೇಶವನ್ನು ಕೇಳುವ ಮೂಲಕ ನಮ್ಮ ಜೀವನವನ್ನು ಪವಿತ್ರಗೊಳಿಸೋಣ ಎಂದು ತಿಳಿಸಿದರು.

ಸುತ್ತೂರು ಶ್ರೀಮಠವು ಜನರಲ್ಲಿ ಧಾರ್ಮಿಕ, ಸಾಮಾಜಿಕ ಜಾಗೃತಿ ಹಾಗೂ ಭಕ್ತಿ, ಶ್ರದ್ಧೆ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಸುತ್ತೂರು ಜಾತ್ರೆ ಮೈಸೂರು ದಸರಾ ಮಹೋತ್ಸವಕ್ಕೆ ಸಮಾನವಾದುದು. ಇದು ಒಂದು ವಿಶೇಷ ಜಾತ್ರೆ ಎಂದ ಅವರು, ಪರಮಪೂಜ್ಯ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರನ್ನು ಸ್ಮರಿಸುತ್ತಾ ನಾನು ಶ್ರೀಗಳನ್ನು ಜನರ ಹೃದಯದಲ್ಲಿ ಕಾಣುತ್ತಿದ್ದೇನೆ. ಸುತ್ತೂರು ಮಠ ಮತ್ತು ಸಿದ್ಧಗಂಗಾ ಮಠ ಸಮಾಜದ ಎರಡು ಕಣ್ಣುಗಳಿದ್ದಂತೆ, ಈ ಮಠಗಳು ಅವಿನಾಭಾವ ಸಂಬಂಧವನ್ನು ಹೊಂದಿದ್ದು, ಈ ಜಾತ್ರಾಮಹೋತ್ಸವದ ಸಂದರ್ಭದಲ್ಲಿ ಭಾಗವಹಿಸುವುದು ನನಗೆ ತುಂಬಾ ಸಂತೋಷವಾಗಿದೆ ಎಂದು ನುಡಿದರು. – ಮಂದಾರ ಶ್ರೀನಿವಾಸ್



ರಥಾರೂಢರಾದ ಆದಿಜಗದ್ಗುರುಗಳ ಉತ್ಸವಮೂರ್ತಿಗೆ ಪುಷ್ಪಾರ್ಚನೆ ಮಾಡುತ್ತಿರುವ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಶ್ರೀ ಸಿದ್ದಗಂಗಾ ಶ್ರೀಗಳು, ವಿವಿಧ ಮಠಾಧೀಶರು, ಕೇಂದ್ರ ಸಚಿವರಾದ ಶ್ರೀ ಅನಂತಕುಮಾರ್ ದತ್ತಾತ್ರೇಯ ಹೆಗ್ಡೆ ಹಾಗೂ ಅಪಾರ ಭಕ್ತಸ್ತೋಮ

## ಜನಮಾನಸದ ನಿಜಕಾಶಿ



ಜಾತ್ರಾ ಮಹೋತ್ಸವದಲ್ಲಿ ಹುಬ್ಬಳ್ಳಿಯ ವರೂರಿನ ಶ್ರೀಕ್ಷೇತ್ರ ನವಗ್ರಹ ತೀರ್ಥ, **ಸ್ವಸ್ತಿಶ್ರೀ ಶ್ರೀ ಧರ್ಮಸೇನ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮಿಗಳವರು** ಆಶೀರ್ವಚನ ನೀಡುತ್ತಾ, ಸುತ್ತೂರು ಶ್ರೀಕ್ಷೇತ್ರದ ಮಹಾರಥೋತ್ಸವವನ್ನು ಕಣ್ಣಾರೆ ಕಂಡು ನನಗೆ ಪರಮಾನಂದವಾಯಿತು. ಈ ಕ್ಷೇತ್ರವು ಯಾವುದೇ ಜಾತಿ–ಭೇದವಿಲ್ಲದೇ ಸರ್ವರನ್ನು ಪ್ರೀತಿಯಿಂದ ಪೊರೆಯುತ್ತಿದ್ದು, ಜನಮಾನಸದ ನಿಜಕಾಶಿಯಂತಿದೆ. ಸಿದ್ಧಗಂಗಾ ಶ್ರೀಕ್ಷೇತ್ರದ ಶ್ರೀ ಶಿವಕುಮಾರ ಮಹಾಸ್ವಾಮಿಗಳವರನ್ನು ಸುತ್ತೂರು ಶ್ರೀಗಳಲ್ಲಿ ಕಾಣಬಹುದಾಗಿದೆ. ಇಲ್ಲಿನ ಬೃಹತ್ ರಥವು ಶ್ರೀಕ್ಷೇತ್ರದ ಕೀರ್ತಿಗೆ ಪ್ರತ್ಯಕ್ಷ ಸಾಕ್ಷಿಯಾಗಿದೆ ಎಂದು ನುಡಿದರು. –ಕುಮಾರ್ ಜೆ ಎನ್

# ‘ಸದೃಢ ದೇಹದಿಂದ ಸದೃಢ ಮನಸ್ಸು’

ಪಂಚಭೂತಗಳಿಂದಾದ ಈ ಶರೀರವು ಆರೋಗ್ಯಕರವಾಗಿದ್ದಾಗ ಒಳ್ಳೆಯ ಆಲೋಚನೆಗಳು ಮೂಡುತ್ತವೆ ಇದರಿಂದ ಸಮಾಜದಲ್ಲಿ ಉತ್ತಮ ವಾತಾವರಣವಿರುತ್ತದೆ ಎಂದು ಚಿತ್ರಕಲೆ, ಗಾಳಿಪಟ ಸ್ಪರ್ಧೆ ಹಾಗೂ 51ನೇ ದನಗಳ ಜಾತ್ರೆಯ ಉದ್ಘಾಟನಾ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಭಾರತ ಸರ್ಕಾರದ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಸಚಿವರಾದ **ಶ್ರೀ ಅಶ್ವಿನ್‌ಕುಮಾರ ಚೌಬೆ** ರವರು ಹೇಳಿದರು.

ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಶ್ರೀಕ್ಷೇತ್ರವು ಸಾಮಾಜಿಕ ಸಾಮರಸ್ಯ ಮೂಡಿಸುತ್ತಿದೆ, ಅಲ್ಲದೇ ಕೃಷಿಕರ ಬೇಸಾಯಕ್ಕೂ, ಮನರಂಜನೆಗೂ ಜಾತ್ರೆಗಳು ಸಹಾಯಕವಾಗಿದೆ. ರೈತರ ಕಲ್ಯಾಣಕ್ಕಾಗಿ ಆಯೋಜಿಸಿರುವ ಕೃಷಿ ಮೇಳ ಹಾಗೂ ದನಗಳ ಜಾತ್ರೆಯಂತಹ ಕಾರ್ಯಕ್ರಮಗಳು ಶ್ರೀಗಳಿಗಿರುವ ಕಾಳಜಿಯನ್ನು ಎತ್ತಿ ತೋರಿಸುತ್ತದೆ ಎಂದರು.

ಗಾಳಿಪಟ ಸ್ಪರ್ಧೆ ಹಾಗೂ ಚಿತ್ರಕಲೆ ಸ್ಪರ್ಧೆಗಳು ಶಾರೀರಿಕ ಹಾಗೂ ಮಾನಸಿಕವಾಗಿ ಮನುಷ್ಯನ್ನು ಸದೃಢಗೊಳಿಸುತ್ತವೆ.

ಭಜನೆ ಕಾರ್ಯಕ್ರಮಗಳು ಆತ್ಮ ಶುದ್ಧಿಯಿಂದ ಆಧ್ಯಾತ್ಮಿಕ ಶ್ರದ್ಧೆಯನ್ನು ಬೆಳೆಸುತ್ತವೆ. ಕಳೆದ ವರ್ಷ ಈ ಮಹಾ ಸಂಸ್ಥಾನಕ್ಕೆ ಬರುವ ಮಹದಾಸೆಯನ್ನು ಹೊಂದಿದ್ದೆನು. ಈಗ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವ ಮೂಲಕ ಶ್ರೀಮಠದ ಹಿರಿಮೆ ಹಾಗೂ ಅದರ ಸೇವಾ ಕ್ಷೇತ್ರಗಳ ವ್ಯಾಪ್ತಿಯನ್ನು ಕಣ್ಣಾರೆ ಕಂಡು ತುಂಬಾ ಸಂತೋಷವಾಗಿದೆ. ಶ್ರೀಗಳ ದರ್ಶನ ಹಾಗೂ ಆಶೀರ್ವಾದ ದೊರೆತು ಧನ್ಯನಾಗಿದ್ದೇನೆ ಎಂದರು. – ಕುಮಾರ್.ಜೆ.ಎನ್




ಕೇಂದ್ರ ಸಚಿವರಾದ ಶ್ರೀ ಅಶ್ವಿನ್‌ಕುಮಾರ ಚೌಬೆರವರು ಜಾತ್ರಾ ಮಹೋತ್ಸವದಲ್ಲಿ ಚಿತ್ರಕಲೆ ಹಾಗೂ ಗಾಳಿಪಟ ಸ್ಪರ್ಧೆ, ಐವತ್ತೊಂದನೆಯ ದನಗಳ ಜಾತ್ರೆಗೆ ಚಾಲನೆ ನೀಡಿ ಮಾತನಾಡಿದರು. ಚಿತ್ರದಲ್ಲಿ ಶ್ರೀ ಆರ್. ಗಣೇಶ್, ಶ್ರೀ ಎಂ. ಶಿವಣ್ಣ, ವಾಟಾಳು ಶ್ರೀಗಳು, ಕೋಡಿಮಠದ ಶ್ರೀಗಳು, ಮರಳೇಗವಿ ಮಠದ ಶ್ರೀಗಳು, ಶ್ರೀ ಎಸ್.ಎ. ರಾಮದಾಸ್, ಶ್ರೀ ಕವೀಶ್ ಗೌಡ ಮೊದಲಾದವರಿದ್ದಾರೆ.

Printed by : Academy Newspapers Private Limited (Publishers of Star of Mysore and Mysooru Mithra)
15-C, Industrial 'A' Layout, Bannimantap, Mysore - 570 015